# ಮೀನುಗಾರಿಕೆ ಇಲಾಖೆ

## ವಾರ್ಷಿಕ ವರದಿ 2015–16

1.1 ಮೀನುಗಾರಿಕೆಯು ಪೌಷ್ಠಿಕ ಆಹಾರ, ವಿದೇಶಿ ವಿನಿಮಯ ಹಾಗೂ ಉದ್ಯೋಗಾವಕಾಶದ ಸೃಷ್ಠಿಯ ಮೂಲವಾಗಿರುವುದರಿಂದ ರಾಜ್ಯದ ಹಾಗೂ ದೇಶದ ಆರ್ಥಿಕ ಪ್ರಗತಿಯಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದೆ.

1.2 ಕರ್ನಾಟಕ ರಾಜ್ಯವು 2.93 ಲಕ್ಷ ಹೆಕ್ಟೇರ್ ವಿಸ್ತೀರ್ಣವುಳ್ಳ ಕೆರೆ, ಕೊಳಗಳನ್ನು ಮತ್ತು 2.72 ಲಕ್ಷ ಹೆಕ್ಟೇರ್ ವಿಸ್ತೀರ್ಣವುಳ್ಳ ಜಲಾಶಯಗಳನ್ನೊಳಗೊಂಡು ಒಟ್ಟು 5.65 ಲಕ್ಷ ಹೆಕ್ಟೇರಿನಷ್ಟು ಒಳನಾಡು ಜಲ ಸಂಪನ್ಮೂಲವನ್ನು ಹೊಂದಿದೆ. ಇದರ ಜೊತೆಗೆ 8000 ಹೆಕ್ಟೇರಿನಷ್ಟು ಹಿನ್ನೀರು ಪ್ರದೇಶ, 320 ಕಿ.ಮೀ. ಉದ್ದದ ಕರಾವಳಿ ತೀರ ಪ್ರದೇಶ ಹಾಗೂ 27,000 ಚ. ಕಿ.ಮೀ. ವಿಸ್ತೀರ್ಣದ ವಿಶಾಲವಾದ ಭೂಖಂಡ ಪ್ರದೇಶವನ್ನು ಹೊಂದಿದ್ದು, ಮೀನುಗಾರಿಕೆಯ ಅಭಿವೃದ್ಧಿಗೆ ವಿಫುಲ ಅವಕಾಶ ಹೊಂದಿರುತ್ತದೆ.

1.3 2014–15ನೇ ಸಾಲಿನಲ್ಲಿ ಕಡಲ ಮೀನು ಉತ್ಪಾದನೆಯು 3.898 ಲಕ್ಷ ಮೆಟ್ರಿಕ್ ಟನ್‌ಗಳಷ್ಟಾಗಿರುತ್ತದೆ. ಕಡಲ ಮೀನುಗಾರಿಕೆಯ ಕಾರ್ಯಾಚರಣೆಯಲ್ಲಿ 3780 ಯಾಂತ್ರೀಕೃತ ದೋಣಿಗಳು, 6978 ಮೋಟರೀಕೃತ ದೋಣಿಗಳು ಮತ್ತು 8119 ನಾಡ ದೋಣಿಗಳಿವೆ. ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ರಾಜ್ಯದ ಒಟ್ಟು ಕಡಲ ಮೀನು ಉತ್ಪಾದನೆಯಲ್ಲಿ ಶೇಕಡ 85ಕ್ಕಿಂತಲೂ ಹೆಚ್ಚಿನ ಪ್ರಮಾಣದ ಮೀನನ್ನು ಹಿಡಿಯುತ್ತಿವೆ.

1.4 2014–15 ನೇ ಸಾಲಿನಲ್ಲಿ ರೂ.1426.53 ಕೋಟಿ ಮೌಲ್ಯದ 128,415 ಮೆಟ್ರಿಕ್ ಟನ್‌ಗಳಷ್ಟು ಕಡಲ ಉತ್ಪನ್ನಗಳನ್ನು ರಾಜ್ಯದಿಂದ ರಫ್ತು ಮಾಡಲಾಗಿದೆ.

1.5 ಯಾಂತ್ರೀಕೃತ ಮೀನುಗಾರಿಕೆಯನ್ನು ಲಾಭದಾಯಕಗೊಳಿಸಲು ರಾಜ್ಯ ಮಾರಾಟ ಕರರಹಿತ ಡೀಸೆಲ್ ಪೂರೈಸುವ ಬದಲಾಗಿ 2015–16 ನೇ ಸಾಲಿನಲ್ಲಿ "ಮೀನುಗಾರಿಕೆ ದೋಣಿಗಳಿಗೆ ಡೀಸೆಲ್– ಮಾರಾಟತೆರಿಗೆ ಮರುಪಾವತಿ" ಎಂಬ ಹೊಸ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಆಗಸ್ಟ್ 2015 ರಿಂದ ಯಾಂತ್ರೀಕೃತ ದೋಣಿಗಳು ಮೀನುಗಾರಿಕೆಗೆ ಬಳಸಿದ ಡೀಸೆಲ್ ಮೇಲಿನ ಮಾರಾಟ ಕರವನ್ನು ಸಹಾಯಧನವಾಗಿ ದೋಣಿ ಮಾಲೀಕರ ಬ್ಯಾಂಕು ಖಾತೆಗೆ ನೇರವಾಗಿ ವರ್ಗಾಯಿಸಲಾಗುತ್ತಿದೆ. 1.32 ಲಕ್ಷ ಕಿಲೋ ಲೀಟರ್ ಡೀಸಲ್‌ನ್ನು 3278 ದೋಣಿಗಳಿಗೆ ಸರಬರಾಜು ಮಾಡಲಾಗಿದೆ. ಆಗಸ್ಟ್ 2015 ರಿಂದ ಫೆಬ್ರವರಿ 2016 ರವರೆಗೆ ಸರಬರಾಜು ಮಾಡಿದ ಡೀಸಲ್‌ಗೆ ರೂ.69.96 ಕೋಟಿಗಳ ಸಹಾಯಧನ ನೀಡಲಾಗಿದೆ.

1.6 ಒಳನಾಡು ಮೀನುಗಾರಿಕೆಯಲ್ಲಿ ನೀಲಿಕ್ರಾಂತಿ ತರಲು ರಾಜ್ಯದ ಒಳನಾಡು ಮೀನು ಕೃಷಿಕರಿಗೆ ಸಹಕಾರಿ ಬ್ಯಾಂಕುಗಳ ಮೂಲಕ ಶೂನ್ಯ ಬಡ್ಡಿ ದರದಲ್ಲಿ 1 ಲಕ್ಷ ರೂ.ವರೆಗಿನ ಅಲ್ಪಾವಧಿ ಸಾಲ ನೀಡುವ ಕುರಿತು ಸಹಕಾರ ಇಲಾಖೆಯಿಂದ ಯೋಜನೆ ಜಾರಿಗೆ ತರಲಾಗಿದೆ.

1.7 ಕ್ಲಸ್ಟರ್ ಮಾದರಿಯಲ್ಲಿ ಆಯ್ದ 8 ತಾಲ್ಲೂಕುಗಳಲ್ಲಿ ಸಮಗ್ರವಾಗಿ ಮತ್ತು ಸುಸಂಘಟಿತ ಮಾದರಿಯಲ್ಲಿ ಮೀನು ಕೃಷಿಯ ಅಭಿವೃದ್ಧಿಯನ್ನು ರಾಷ್ಟ್ರಿಯ ಕೃಷಿ ವಿಕಾಸ ಯೋಜನೆಯಡಿ ಕೈಗೊಂಡಿದ್ದು 15.00 ಹೆಕ್ಟೇರ್ ಪ್ರದೇಶದಲ್ಲಿ ಮೀನು ಕೊಳ ನಿರ್ಮಾಣ ಕೈಗೊಳ್ಳಲಾಗುತ್ತಿದೆ.

1.8 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಜಲಾಶಯದಲ್ಲಿ ಪಂಜರ ಕೃಷಿ ಕೈಗೊಳ್ಳಲು ಒಂದು ಘಟಕವನ್ನು ಸ್ಥಾಪಿಸಲು ಡಾ:ಬಿ.ಆರ್.ಅಂಬೇಡ್ಕರ್ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ವರ್ಗಗಳ ಮೀನುಗಾರರ ಸಹಕಾರ ಸಂಘ ನಿಯಮಿತ, ಸಣಬ ಅಂಚೆ, ತಿರುಮಲಾಪುರ, ಪಾಂಡವಪುರ ತಾಲ್ಲೂಕು ಮಂಡ್ಯ ಜಿಲ್ಲೆ ರವರಿಗೆ ರೂ.78.00 ಲಕ್ಷ ನೀಡಲಾಗಿದೆ.

1.9 ಆರ್.ಕೆ.ವಿ.ವೈ. ಯೋಜನೆ ಸಮಗ್ರ ಮೀನು ಮಾರಾಟ ವ್ಯವಸ್ಥೆಯನ್ನು ಉತ್ತಮಗೊಳಿಸಲು ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು ರವರ ಮೂಲಕ 2 ಮೀನು ಉಪಾಹಾರ ಕೇಂದ್ರಗಳ


ಸ್ಥಾಪನೆಗೆ, ಮತ್ಸ್ಯದರ್ಶಿನಿ ಬೆಂಗಳೂರಿನ ಆಧುನೀಕರಣಕ್ಕೆ ಮತ್ತು 2 ಮೊಬೈಲ್ ಮೀನು ಮಾರಾಟ / ಉಪಾಹಾರ ಗೃಹಗಳನ್ನು ಪ್ರಾರಂಭಿಸಲು ರೂ.1.00 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.

1.10 ಪ್ರತಿ ಕಂದಾಯ ವಿಭಾಗಕ್ಕೆ ಒಂದು ಮೀನುಗಾರಿಕೆ ಸಂಚಾರಿ ವಿಸ್ತರಣಾ ಮತ್ತು ರೋಗ ಪತ್ತೆ ವಾಹನ ಒದಗಿಸಿ ಮೀನುಗಾರಿಕೆಯಲ್ಲಿರುವ ವಿವಿಧ ಅವಕಾಶಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ರೂ.26.52 ಲಕ್ಷ ವಾಹನ ಖರೀದಿಗೆ ನೀಡಲಾಗಿದೆ.

1.11 ಮೀನುಗಾರಿಕೆ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಲು ಮತ್ಸ್ಯಮೇಳಗಳನ್ನು ರೂ.77.81 ಲಕ್ಷ ವೆಚ್ಚದಲ್ಲಿ ಕೃಷಿ ವಿಶ್ವವಿದ್ಯಾಲಯಗಳ ಸಹಕಾರದೊಂದಿಗೆ ಬೆಂಗಳೂರು, ಧಾರವಾಡ, ಬೀದರ್, ರಾಯಚೂರು ಮತ್ತು ಶಿವಮೊಗ್ಗದಲ್ಲಿ ಏರ್ಪಡಿಸಲಾಗಿದೆ.

1.12 ಮತ್ಸ್ಯಾಶ್ರಯ ಯೋಜನೆಯಡಿ ಮೀನುಗಾರರ ಕುಟುಂಬಗಳಿಗೆ 1000 ಮನೆಗಳನ್ನು ನಿರ್ಮಿಸಲು ವಿಧಾನಸಭೆವಾರು ಮನೆ ಹಂಚಿಕೆಯನ್ನು ಮಾಡಲಾಗಿದೆ.

1.13 **ಮೀನುಗಾರಿಕೆ ಇಲಾಖೆಯ ಆಡಳಿತ ರೂಪರೇಷೆ**



ಮೀನುಗಾರಿಕೆ ಇಲಾಖೆಯು ಮೀನುಗಾರಿಕೆ ಸಚಿವರ ಅಧಿಕಾರ ವ್ಯಾಪ್ತಿಯಲ್ಲಿರುತ್ತದೆ. ಸರ್ಕಾರದ ಹಂತದಲ್ಲಿ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆರವರು ಮುಖ್ಯಸ್ಥರಾಗಿರುತ್ತಾರೆ. ಮೀನುಗಾರಿಕೆ ಇಲಾಖೆಯ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳು ಮೀನುಗಾರಿಕೆ ನಿರ್ದೇಶಕರ ನೇತೃತ್ವದಲ್ಲಿ ನಡೆಯುತ್ತಿವೆ. ನಿರ್ದೇಶಕರ ಸಹಾಯಕ್ಕಾಗಿ ನಿರ್ದೇಶನಾಲಯದಲ್ಲಿ ಇಬ್ಬರು ಜಂಟಿ ನಿರ್ದೇಶಕರು, ಇಬ್ಬರು ಉಪ ನಿರ್ದೇಶಕರು, ಒಬ್ಬರು ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು (ಆಡಳಿತ) ಹಾಗೂ 10 ಸಹಾಯಕ ನಿರ್ದೇಶಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆ. 7 ಪ್ರಾಂತೀಯ ಉಪ ನಿರ್ದೇಶಕರು, 30 ಜಿಲ್ಲಾ ಮೀನುಗಾರಿಕೆ ಅಧಿಕಾರಿಗಳು ಹಾಗೂ 125 ತಾಲ್ಲೂಕು ಮಟ್ಟದ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಇಲಾಖೆಯಲ್ಲಿ ಒಟ್ಟು 1401 ವಿವಿಧ ವೃಂದದ ಹುದ್ದೆಗಳು ಮಂಜೂರಾಗಿದ್ದು 723 ಅಧಿಕಾರಿ ಮತ್ತು ಸಿಬ್ಬಂದಿ ಹುದ್ದೆಗಳು ಭರ್ತಿಯಾಗಿದ್ದು 678 ಹುದ್ದೆಗಳು ಖಾಲಿ ಇವೆ.

**2. 2015–16 ರ ವಾರ್ಷಿಕ ಯೋಜನೆ:**

2015–16 ನೇ ಸಾಲಿನಲ್ಲಿ ಒಟ್ಟು ರೂ.26789.00 ಲಕ್ಷಗಳ ರಾಜ್ಯ ಯೋಜನಾ ಅನುದಾನವನ್ನು ನೀಡಲಾಗಿತ್ತು. ಇದರಲ್ಲಿ ರೂ.25882.00 ಲಕ್ಷಗಳನ್ನು ರಾಜ್ಯ ಯೋಜನೆಗಳಿಗೆ ಮತ್ತು ರೂ.907.00 ಲಕ್ಷಗಳನ್ನು ಜಿಲ್ಲಾ ಪಂಚಾಯತ್ ಯೋಜನೆಗಳಿಗಾಗಿ ಒದಗಿಸಲಾಗಿದೆ. ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಕೇಂದ್ರ ಪಾಲಿನ ಅನುದಾನ ರೂ.5744.00 ಲಕ್ಷ ಒದಗಿಸಲಾಗಿದೆ. ಇದಲ್ಲದೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೂ.10.00 ಲಕ್ಷ ಅನುದಾನ ಕಾಯ್ದಿರಿಸಲಾಗಿರುತ್ತದೆ.

2015–16 ರಲ್ಲಿ ರಾಜ್ಯ (ಜಿಲ್ಲಾ ಪಂಚಾಯತ್ ಯೋಜನೆಗಳು ಸೇರಿ) ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಡಿ ಒದಗಿಸಿದ ಅನುದಾನದ ವಿವರ ಕೆಳಕಂಡಂತಿರುತ್ತದೆ.

**(ರೂ.ಲಕ್ಷಗಳಲ್ಲಿ)**

| ವಿವರ | ರಾಜ್ಯದ ಪಾಲು | ಕೇಂದ್ರದ ಪಾಲು | ಒಟ್ಟು |
|---|---|---|---|
| **ರಾಜ್ಯ ವಲಯ ಯೋಜನೆಗಳು** | | | |
| ಅ) 2405–ಮೀನುಗಾರಿಕೆ | 15180.00 | 686.00 | 15866.00 |
| ಆ) 4405–ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚ | 5016.00 | 5000.00 | 10016.00 |
| **ಒಟ್ಟು ರಾಜ್ಯ ವಲಯ** | **20196.00** | **5686.00** | **25882.00** |
| **ಜಿಲ್ಲಾ ಪಂಚಾಯತ್ ಯೋಜನೆಗಳು** | | | |
| ಅ) 2405–ಮೀನುಗಾರಿಕೆ | 849.00 | 58.00 | 907.00 |
| **ಒಟ್ಟು** | **21045.00** | **5744.00** | **26789.00** |

### 3. ಸಮುದ್ರ ಮೀನುಗಾರಿಕೆ

**3.1ಮೀನುಗಾರಿಕೆ ಬಂದರುಗಳು – ಕೇಂದ್ರ ಪುರಸ್ಕೃತ ಯೋಜನೆ (4405–00–103–6–01):**

- ರೂ.57.60 ಕೋಟಿ ಅಂದಾಜು ವೆಚ್ಚದ ಮಂಗಳೂರು 3ನೇ ಹಂತ, ರೂ.37.15 ಕೋಟಿ ಅಂದಾಜು ವೆಚ್ಚದ ಮಲ್ಪೆ 3ನೇ ಹಂತ ಮತ್ತು ರೂ.26.98 ಕೋಟಿಗಳ ವೆಚ್ಚದಲ್ಲಿ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಮೀನುಗಾರಿಕೆ ಬಂದರಿನ ಎರಡನೇ ಹಂತದ ಕಾಮಗಾರಿಗಳನ್ನು ಕೈಗೊಳ್ಳಲು ಕೇಂದ್ರ ಸರ್ಕಾರದಿಂದ ಮಂಜೂರಾತಿ ಪಡೆದು ಕಾಮಗಾರಿಗಳು ಪ್ರಗತಿಯಲ್ಲಿದೆ. ಈ ಸಾಲಿನಲ್ಲಿ ಮಲ್ಪೆ ಮೀನುಗಾರಿಕೆ ಬಂದರಿಗೆ ರೂ.807.81 ಲಕ್ಷ, ಮಂಗಳೂರು ಮೀನುಗಾರಿಕೆ ಬಂದರಿಗೆ ರೂ.2095.76 ಲಕ್ಷ ಮತ್ತು ಹೊನ್ನಾವರ ಮೀನುಗಾರಿಕೆ ಬಂದರಿಗೆ ರೂ.1084.68 ಲಕ್ಷ ವೆಚ್ಚ ಮಾಡಲಾಗಿದೆ. ಗಂಗೊಳ್ಳಿ ಮೀನುಗಾರಿಕೆ ಬಂದರಿನ ಬ್ರೇಕ್ ವಾಟರ್ ನಿರ್ಮಾಣಕ್ಕಾಗಿ ರೂ.197.15 ಲಕ್ಷ ವೆಚ್ಚ ಮಾಡಲಾಗಿದೆ. ಇತರೆ ಕಾಮಗಾರಿಗಳಿಗೆ ರೂ.80.60 ಲಕ್ಷ ವೆಚ್ಚ ಮಾಡಲಾಗಿದೆ.

- ಸಮುದ್ರ ಕೊರೆತವನ್ನು ತಡೆಗಟ್ಟಲು ಹಾಗೂ ದೋಣಿಗಳಿಗೆ ಸುರಕ್ಷಿತ ಇಳಿದಾಣ ಒದಗಿಸಲು ಗಂಗೊಳ್ಳಿ, ತೆಂಗಿನಗುಂಡಿ, ಅಳ್ವೆಕೋಡಿ ಮತ್ತು ಬೆಳಂಬಾರ ತಡೆಗೋಡೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಪ್ರಸ್ತಾವನೆಗಳು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದ್ದು, ಗಂಗೊಳ್ಳಿಯಲ್ಲಿ ತಡೆಗೋಡೆ ನಿರ್ಮಾಣ ಮಾಡಲು ಕೇಂದ್ರ ಸರ್ಕಾರವು ರೂ.102.11 ಕೋಟಿಗೆ ಮಂಜೂರಾತಿ ನೀಡಿ ರೂ.300.00 ಲಕ್ಷ ಬಿಡುಗಡೆ ಮಾಡಿದ್ದು, ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಕಾಮಗಾರಿ ಪ್ರಾರಂಭಿಸಲು ಟೆಂಡರ್ ಅಂತಿಮಗೊಳಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ರೂ.5500.00 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದ್ದು, ಈ ಪೈಕಿ ರೂ.500.00 ಲಕ್ಷಗಳನ್ನು ಕಡಿತಗೊಳಿಸಲಾಗಿರುತ್ತದೆ. ರೂ.5000.00 ಲಕ್ಷಗಳಲ್ಲಿ ಮೇಲಿನಂತೆ ಒಟ್ಟು ರೂ.4266.00 ಲಕ್ಷ ವೆಚ್ಚ ಮಾಡಲಾಗಿದೆ. ಕೇಂದ್ರ ಸರ್ಕಾರವು ಮಲ್ಪೆ ಮೀನುಗಾರಿಕೆ ಬಂದರಿಗೆ ರೂ.500.00 ಲಕ್ಷ, ಮಂಗಳೂರು ಮೀನುಗಾರಿಕೆ ಬಂದರಿಗೆ ರೂ.100.00 ಲಕ್ಷ ಮತ್ತು ಹೊನ್ನಾವರ ಮೀನುಗಾರಿಕೆ ಬಂದರಿಗೆ ರೂ.500.00 ಲಕ್ಷ ಹೀಗೆ ಒಟ್ಟು ರೂ.1100.00 ಲಕ್ಷಗಳ ಕೇಂದ್ರದ ಪಾಲು ಬಿಡುಗಡೆ ಮಾಡಿದೆ.

**3.2 ಮೀನುಗಾರಿಕೆ ಇಳಿದಾಣ ಮತ್ತು ತಂಗುದಾಣಗಳು (4405–00–104–0–02):**

- ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಶಿರೂರು ಅಳ್ವೆಗದ್ದೆಯಲ್ಲಿ ರೂ.980.00 ಲಕ್ಷಗಳ ವೆಚ್ಚದಲ್ಲಿ ತಡೆಗೋಡೆ, ಕೊಡೇರಿ, ಬೈಂದೂರಿನಲ್ಲಿ ರೂ.3000.00 ಲಕ್ಷ ವೆಚ್ಚದಲ್ಲಿ ಮೀನುಗಾರಿಕೆ ಇಳಿದಾಣ ಕೇಂದ್ರ ನಿರ್ಮಾಣ, ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮರವಂತೆಯಲ್ಲಿ ರೂ. 4500.00 ಲಕ್ಷಗಳ ವೆಚ್ಚದಲ್ಲಿ ಕೇರಳ ಮಾದರಿಯ ಬಾಹ್ಯ ಬಂದರು ನಿರ್ಮಾಣ, ತೆಂಗಿನಗುಂಡಿಯಲ್ಲಿ ರೂ. 562.00 ಲಕ್ಷಗಳಲ್ಲಿ ಮೀನುಗಾರಿಕೆ ಇಳಿದಾಣ ಕೇಂದ್ರ, ಕುಂದಾಪುರ ಕೋಡಿಯಲ್ಲಿ ರೂ. 400.00 ಲಕ್ಷ ಮತ್ತು ಅಳ್ವೆಕೋಡಿಯಲ್ಲಿ ರೂ. 464.00 ಲಕ್ಷ ವೆಚ್ಚದಲ್ಲಿ ಇಳಿದಾಣ ಕೇಂದ್ರಗಳ ನಿರ್ಮಾಣ ಪ್ರಗತಿಯಲ್ಲಿದ್ದು, ಪ್ರಸಕ್ತ ಸಾಲಿನಲ್ಲಿ ಶೀರೂರು ಅಳ್ವೆಗದ್ದೆ ಮೀನುಗಾರಿಕೆ ಬಂದರಿಗೆ ರೂ. 113.20 ಲಕ್ಷ, ಕೊಡೇರಿ ಬಂದರಿಗೆ ರೂ. 453.74 ಲಕ್ಷ, ಮರವಂತೆ ಮೀನುಗಾರಿಕೆ ಬಂದರಿಗೆ ರೂ. 1115.22 ಲಕ್ಷ, ತೆಂಗಿನಗುಂಡಿ ರೂ.28.81 ಲಕ್ಷ, ಕುಂದಾಪುರ ಕೋಡಿಜೆಟ್ಟಿ ವಿಸ್ತರಣೆಗೆ ರೂ.78.83 ಲಕ್ಷ ಹಾಗೂ ಅಳ್ವೆಕೋಡಿಗೆ ರೂ.40.46 ಲಕ್ಷ ವೆಚ್ಚ ಮಾಡಲಾಗಿದೆ.

- ಕೇಂದ್ರ ಸರ್ಕಾರವು ಆಮದಳ್ಳಿ ಮೀನುಗಾರಿಕೆ ಬಂದರಿನ ಕಾಮಗಾರಿಗಳನ್ನು ರೂ.18.74 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಮಂಜೂರಾತಿ ನೀಡಿದೆ. ಕಾಮಗಾರಿ ಪ್ರಾರಂಭಗೊಂಡಿದ್ದು ರೂ.161.27ಲಕ್ಷ ವೆಚ್ಚ ಮಾಡಲಾಗಿದೆ. ಉಳಿದ ಕಾಮಗಾರಿಗಳಿಗೆ ರೂ.111.97 ಲಕ್ಷ ವೆಚ್ಚ ಮಾಡಲಾಗಿದೆ.

- ಕೊಡೇರಿಯಲ್ಲಿ ತಡೆಗೋಡೆಯನ್ನು ಅಂದಾಜು ರೂ.3300.00 ಲಕ್ಷ ವೆಚ್ಚದಲ್ಲಿ ನಿರ್ಮಿಸಲು ರಾಜ್ಯ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

- ಅಳ್ವೆಕೋಡಿ ಮೀನುಗಾರಿಕೆ ಇಳಿದಾಣ ಕೇಂದ್ರದಲ್ಲಿ ಧಕ್ಕೆ ವಿಸ್ತರಣೆ ಕಾಮಗಾರಿಯನ್ನು ರೂ.5.00 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಯೋಜನೆಯಡಿ ಆಯವ್ಯಯದಲ್ಲಿ ರೂ.2900.00 ಲಕ್ಷಗಳ ಅನುದಾನ ಒದಗಿಸಲಾಗಿತ್ತು. ಈ ಪೈಕಿ ರೂ.500.00 ಲಕ್ಷಗಳನ್ನು ಕಡಿತಗೊಳಿಸಿ ಉಳಿದ ರೂ.2400.00 ಲಕ್ಷಗಳಲ್ಲಿ ಮೇಲಿನಂತೆ ಒಟ್ಟು ರೂ.2103.50 ಲಕ್ಷ ವೆಚ್ಚ ಮಾಡಲಾಗಿದೆ.

### 3.3 ನಬಾರ್ಡ್ ನೆರವಿನ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಧಿ ಯೋಜನೆ (4405–00–800–2–03):

ಆರ್‌ಐಡಿಎಫ್– 18 ರಡಿಯಲ್ಲಿ 4 ಕಾಮಗಾರಿಗಳನ್ನು ರೂ.5.72 ಕೋಟಿಗಳ ವೆಚ್ಚದಲ್ಲಿ ತೆಗೆದುಕೊಳ್ಳಲು ಮಂಜೂರಾತಿ ಪಡೆಯಲಾಗಿದೆ. ಆರ್‌ಐಡಿಎಫ್– 19 ರಡಿಯಲ್ಲಿ 5 ಕಾಮಗಾರಿಗಳನ್ನು ರೂ.13.50 ಕೋಟಿಗಳ ವೆಚ್ಚದಲ್ಲಿ ತೆಗೆದುಕೊಳ್ಳಲು ನಬಾರ್ಡ್ ಸಂಸ್ಥೆಯಿಂದ ಮಂಜೂರಾತಿ ಪಡೆಯಲಾಗಿದೆ. ಆರ್‌ಐಡಿಎಫ್–20ರಲ್ಲಿ ರೂ.29.93 ಕೋಟಿ ವೆಚ್ಚದಲ್ಲಿ 17 ರಸ್ತೆಗಳು, 5 ಸೇತುವೆ, 3 ಜೆಟ್ಟಿ (ಕಾರವಾರ, ಭಟ್ಕಳ ಮತ್ತು ಮುಲ್ಕಿ) ಹಾಗೂ 1 ಮೀನುಮರಿ ಉತ್ಪಾದನಾ ಕೇಂದ್ರ ಕೈಗೊಳ್ಳಲು ಮಂಜೂರಾತಿ ನೀಡಲಾಗಿದೆ. 2014–15 ನೇ ಸಾಲಿನ ಆಯವ್ಯಯದಲ್ಲಿ ರೂ.2000.00 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಈ ಪೈಕಿ ರೂ.1300.00 ಲಕ್ಷಗಳನ್ನು ಕಡಿತಗೊಳಿಸಲಾಗಿರುತ್ತದೆ. ರೂ.700.00 ಲಕ್ಷಗಳಲ್ಲಿ ರೂ.492.76 ಲಕ್ಷವನ್ನು ವೆಚ್ಚ ಮಾಡಲಾಗಿದೆ.

### 3.4 ಮೀನುಗಾರಿಕೆ ಬಂದರುಗಳಲ್ಲಿ ಹೂಳೆತ್ತುವಿಕೆ–ಕೇಂದ್ರ ಪುರಸ್ಕೃತ ಯೋಜನೆ(4405–00–103–1–02):

ರಾಜ್ಯದಲ್ಲಿ ಕೇಂದ್ರದ ನೆರವಿನೊಂದಿಗೆ ಹಾಗೂ ರಾಜ್ಯ ಯೋಜನೆಗಳಡಿಯಲ್ಲಿ ಪ್ರಮುಖ ಮೀನುಗಾರಿಕೆ ಬಂದರು ಮತ್ತು ಸಣ್ಣ ಪ್ರಮಾಣದ ಇಳಿದಾಣ ಕೇಂದ್ರಗಳನ್ನು ನಿರ್ಮಿಸಿದ್ದು, ನಿರ್ಮಾಣದ ನಂತರ ಕಾಲ ಕಾಲಕ್ಕೆ ಹೂಳೆತ್ತದೇ ಇರುವುದರಿಂದ ಹಾಗೂ ನೈಸರ್ಗಿಕ ಕಾರಣಗಳಿಂದಾಗಿ (ನೀರಿನ ಹರಿವು ಕಡಿಮೆಯಾಗಿರುವುದರಿಂದ) ಕೆಲವು ಬಂದರು / ಇಳಿದಾಣ ಕೇಂದ್ರಗಳಲ್ಲಿ ಹೂಳಿನ ಸಮಸ್ಯೆ ತೀವ್ರವಾಗಿದೆ. ಹೂಳಿನ ಸಮಸ್ಯೆಯನ್ನು ಬಗೆಹರಿಸಲು ಹೂಳೆತ್ತುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

2014–15 ನೇ ಸಾಲಿನಲ್ಲಿ ಹೆಜಮಾಡಿ, ಕಂಡತಪಳ್ಳಿ, ಕೋಡಿಬೆಂಗ್ರೆ, ಅಮದಳ್ಳಿ, ಮಲ್ಪೆ ಉದ್ಯಾವರ, ಭಟ್ಕಳ ಮತ್ತು ಹಂಗಾರಕಟ್ಟೆಗಳಲ್ಲಿ ಹೂಳೆತ್ತುವ ಕಾರ್ಯಕ್ಕಾಗಿ ರೂ.340.27 ಲಕ್ಷ ವೆಚ್ಚ ಮಾಡಲಾಗಿದೆ. ಮಲ್ಪೆ, ಬೇಲಿಕೇರಿ ಹಾಗೂ ಕೋಡಿಕನ್ಯಾನಗಳಲ್ಲಿ ಹೂಳೆತ್ತುವ ಕಾಮಗಾರಿಗಳನ್ನು ಕೇಂದ್ರ ಪುರಸ್ಕೃತ ಯೋಜನೆಯಡಿ ಕೈಗೊಳ್ಳಲು ಮಂಜೂರಾತಿ ದೊರಕಿದೆ. ಕೇಂದ್ರ ಸರ್ಕಾರವು ಈ 3 ಕಾಮಗಾರಿಗಳಿಗೆ ಒಟ್ಟು ರೂ.100.00 ಲಕ್ಷ ಬಿಡುಗಡೆ ಮಾಡಿರುತ್ತದೆ.

### 3.5 ಕರಾವಳಿ ಕೊಂಡಿ ರಸ್ತೆಗಳ ನಿರ್ವಹಣೆ (2405–00–800–0–15)

ರಾಜ್ಯದ ಕರಾವಳಿಯ ಮೂರು ಜಿಲ್ಲೆಗಳಲ್ಲಿ ಒಟ್ಟು 355.13 ಕಿಮೀ ಉದ್ದದ 218 ಮೀನುಗಾರಿಕೆ ಕೊಂಡಿ ರಸ್ತೆಗಳಿರುತ್ತವೆ. ಸದರಿ ಮೀನುಗಾರಿಕೆ ಕೊಂಡಿ ರಸ್ತೆಗಳ ದುರಸ್ತಿ, ಅಭಿವೃದ್ಧಿ ಮತ್ತು ನಿರ್ವಹಣೆಗೆ 2014–15 ನೇ ಸಾಲಿನಲ್ಲಿ ರೂ.500.00 ಲಕ್ಷಗಳನ್ನು ಒದಗಿಸಲಾಗಿರುತ್ತದೆ. ರೂ.444.14 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

### 3.6 ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುಚ್ಛಕ್ತಿಗೆ ಸಹಾಯಧನ (2405–00–110–0–03)

ಈ ಯೋಜನೆಯಡಿ ಮಂಜುಗಡ್ಡೆ ಘಟಕಗಳಿಗೆ ಉಪಯೋಗಿಸಿದ ವಿದ್ಯುತ್ ಯೂನಿಟ್‌ಗೆ ರೂ.1.50 ಪ್ರತಿ ಘಟಕಕ್ಕೆ ರೂ.3.00 ಲಕ್ಷದಂತೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ. 2014–15 ನೇ ಸಾಲಿನಲ್ಲಿ

ರೂ.390.00 ಲಕ್ಷ ಅನುದಾನ ಒದಗಿಸಲಾಗಿದ್ದು, ಈ ಮೊತ್ತದಲ್ಲಿ ರೂ.389.93 ಲಕ್ಷ ಸಹಾಯಧನವಾಗಿ 182 ಮಂಜುಗಡ್ಡೆ ಸ್ಥಾವರಗಳಿಗೆ ನೀಡಲಾಗಿದೆ.

**3.7 ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳ ಅಭಿವೃದ್ಧಿ ಮತ್ತು ನಿರ್ವಹಣೆ(2405–00–103–0–14):**

ಮೀನುಗಾರಿಕೆ ಬಂದರುಗಳ ಮತ್ತು ಇಳಿದಾಣ ಕೇಂದ್ರಗಳ ನಿರ್ವಹಣೆಯನ್ನು ತೆಗೆದುಕೊಳ್ಳಲಾಗುತ್ತದೆ. ಅನುದಾನವನ್ನು ಮೀನುಗಾರಿಕೆ ಬಂದರುಗಳ ನಿರ್ವಹಣೆ, ಸ್ವಚ್ಛತೆ, ವಿದ್ಯುತ್, ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಗೆ ಹಾಗೂ ಇತರೆ ದುರಸ್ತಿ ಕಾಮಗಾರಿಗೆ ಉಪಯೋಗಿಸಲು ಒದಗಿಸಲಾಗಿದೆ. 2014–15 ನೇ ಸಾಲಿನಲ್ಲಿ ರೂ.250.00 ಲಕ್ಷಗಳ ಅನುದಾನ ಒದಗಿಸಿದ್ದು ರೂ.240.26 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**3.8 ಇಂಟರ್‌ಮೀಡಿಯೆಟ್ ದೋಣಿಗಳಿಗೆ ಸಹಾಯ (2405–00–103–0–21)**

ಇದು ಕೇಂದ್ರ ಪುರಸ್ಕೃತ ಯೋಜನೆ. ಈ ಯೋಜನೆಯಡಿ ಇಂಟರ್ ಮೀಡಿಯೆಟ್ ದೋಣಿಗಳನ್ನು ನಿರ್ಮಿಸಲು ಕೇಂದ್ರ ಸರ್ಕಾರದಿಂದ ಶೇ.10 ರಷ್ಟು ಗರಿಷ್ಠ ರೂ.6.00 ಲಕ್ಷಗಳ ಸಹಾಯಧನ ನೀಡಲಾಗುತ್ತದೆ. 2014–15 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.300.00 ಲಕ್ಷ ಅನುದಾನ ಒದಗಿಸಲಾಗಿರುತ್ತದೆ. ರಾಜ್ಯದಿಂದ ಸಲ್ಲಿಸಿದ 150 ಪ್ರಸ್ತಾವನೆಗಳು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದ್ದು ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

**4. ಒಳನಾಡು ಮೀನುಗಾರಿಕೆ:**

2014–15 ರಲ್ಲಿ 5299.67 ಲಕ್ಷ ಫ್ರೈ ಮೀನು ಮರಿಗಳ ಉತ್ಪಾದನೆ ಮಾಡಲಾಗಿದೆ. 3129 ಇಲಾಖೆ ಕೆರೆಗಳಲ್ಲಿ 2040.81 ಲಕ್ಷ ಮೀನು ಮರಿಗಳನ್ನು ಮತ್ತು 1728 ಗ್ರಾಮ ಪಂಚಾಯತಿ ಕೆರೆಗಳಲ್ಲಿ 451.50 ಲಕ್ಷ ಮೀನು ಮರಿಗಳನ್ನು ದಾಸ್ತಾನು ಮಾಡಿ ಅಭಿವೃದ್ಧಿಪಡಿಸಲಾಗಿದೆ. ಸದರಿ ಸಾಲಿನಲ್ಲಿ 2.23 ಲಕ್ಷ ಮೆಟ್ರಿಕ್ ಟನ್ ಒಳನಾಡು ಮೀನು ಉತ್ಪಾದನೆಯಾಗಿದೆ.

**4.1 ಮೀನುಮರಿ ಖರೀದಿಗೆ ಸಹಾಯಧನ (2405–00–101–0–28)**

ಮೀನು ಕೃಷಿಕರು ಖರೀದಿಸಿದ ಮೀನುಮರಿಗಳ ಬೆಲೆಯ ಶೇ.50 ರಷ್ಟು ಅಂದರೆ ವ್ಯಕ್ತಿಗತ ಗರಿಷ್ಠ ರೂ.5,000/– ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ.20,000/–ಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ಈ ಯೋಜನೆಯಡಿ ನೀಡಲಾಗುವುದು. ಇದರಿಂದ ಮೀನು ಕೃಷಿಕರಿಗೆ ಒಳ್ಳೆಯ ತಳಿಯ ಮೀನುಮರಿ ದೊರೆತಂತಾಗುತ್ತದೆ. ಅಲ್ಲದೆ ಕಳಪೆ ಗುಣಮಟ್ಟದ ಹೊರ ರಾಜ್ಯದಿಂದ ಮೀನುಮರಿ ಆಮದಾಗುವುದನ್ನು ತಡೆಗಟ್ಟಿದಂತಾಗುತ್ತದೆ. ಈ ಸಂಬಂಧ 2014–15 ನೇ ಸಾಲಿನಲ್ಲಿ ರೂ.50.00 ಲಕ್ಷ ಅನುದಾನವನ್ನು ಬಿಡುಗಡೆಗೊಳಿಸಿದ್ದು ರೂ.41.90 ಲಕ್ಷಗಳನ್ನು ಸಹಾಯಧನ ನೀಡಲು ವೆಚ್ಚ ಮಾಡಲಾಗಿದೆ.

**4.2 ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ (ರಾಜ್ಯ ವಲಯ) (2405–00–101–0–03):**

ಈ ಯೋಜನೆಯಡಿ ಅನುದಾನವನ್ನು ಮೀನುಮರಿ ಕೇಂದ್ರದಲ್ಲಿ ಮೀನುಮರಿ ಉತ್ಪಾದನೆಗೆ, ಫಾರಂಗಳಲ್ಲಿ ಮೀನುಮರಿ ಪಾಲನೆಗೆ, ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನುಮರಿ ಖರೀದಿ ಮತ್ತು ಸಾಗಾಣಿಕೆಗೆ, ವಾಹನಗಳ ಖರೀದಿ, ನಿರ್ವಹಣೆ ಮತ್ತು ಇತರ ಸಲಕರಣೆಗಳ ಖರೀದಿಗೆ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ.

2014–15 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.301.97 ಲಕ್ಷಗಳನ್ನು ಒದಗಿಸಲಾಗಿದ್ದು, ರೂ.322.81 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಸದರಿ ಯೋಜನೆಯಡಿ ಮೀನುಮರಿ ಕೇಂದ್ರಗಳಲ್ಲಿ ಆಹಾರ ಖರೀದಿಗಾಗಿ ರೂ.32.10 ಲಕ್ಷಗಳನ್ನು ಹೆಚ್ಚುವರಿಯಾಗಿ ಒದಗಿಸಲಾಗಿರುತ್ತದೆ.

**4.3 ಜಲಾಶಯದಲ್ಲಿ ಮೀನು ಮರಿ ಬಿತ್ತನೆ (2405-00-101-0-54)**

ರಾಜ್ಯದಲ್ಲಿ ಒಟ್ಟು 82 ಜಲಾಶಯಗಳಿವೆ. ಈ ಜಲಾಶಯಗಳ ಒಟ್ಟು ಜಲ ವಿಸ್ತೀರ್ಣ 2.72 ಲಕ್ಷ ಹೆಕ್ಟೇರ್‌ಗಳಾಗಿರುತ್ತದೆ. ಜಲಾಶಯಗಳನ್ನೆ ತಮ್ಮ ಜೀವನೋಪಾಯಕ್ಕೆ ನಂಬಿರುವ ಸಾವಿರಾರು ಮೀನುಗಾರರ ಕುಟುಂಬಗಳಿವೆ. ಇತ್ತೀಚಿನ ದಿನಗಳಲ್ಲಿ ನದಿಗಳಲ್ಲಿ ಮತ್ತು ಹಲವಾರು ಜಲಾಶಯಗಳಲ್ಲಿ ಮತ್ಸ್ಯ ಸಂಪನ್ಮೂಲಗಳು ಕ್ಷೀಣಿಸಿದ್ದು ಹೆಚ್ಚಿನ ಮೀನು ಶಿಕಾರಿಯಾಗದೆ ಇದನ್ನೇ ಅವಲಂಬಿಸಿರುವ ಮೀನುಗಾರರು ಸಂಕಷ್ಟದಲ್ಲಿದ್ದಾರೆ. ಜಲಾಶಯಗಳಲ್ಲಿ ಶೀಘ್ರವಾಗಿ ಬೆಳೆಯುವ ಭಾರತದ ದೊಡ್ಡಗೆಂಡೆ ಮೀನುಗಳಾದ ಕಾಟ್ಲಾ, ರೋಹು, ಮೃಗಾಲ ತಳಿಗಳು ದಕ್ಷಿಣ ಭಾರತದ ಜಲಸಂಪನ್ಮೂಲಗಳಲ್ಲಿ ಸ್ವಾಭಾವಿಕವಾಗಿ ಉತ್ಪಾದನೆಯಾಗುವುದಿಲ್ಲವಾದ್ದರಿಂದ ಅವುಗಳನ್ನು ಆಗಿಂದಾಗ್ಗೆ ದಾಸ್ತಾನು ಮಾಡುವ ಮೂಲಕ ಸದರಿ ಸಂಪನ್ಮೂಲಗಳಲ್ಲಿ ಮತ್ಸ್ಯ ಸಂಪನ್ಮೂಲ ವೃದ್ಧಿಗೊಳಿಸುವುದು ಅತ್ಯಗತ್ಯವಾಗಿದೆ.

ಈ ಯೋಜನೆಯಡಿ ರಾಜ್ಯದ ಆಯ್ದ ಜಲಾಶಯಗಳಲ್ಲಿ ಬಲಿತ ಮೀನು ಮರಿಗಳ ಬಿತ್ತನೆ ಮಾಡಿ ಜಲಾಶಯಗಳ ಅಭಿವೃದ್ಧಿ ಕೈಗೊಳ್ಳಲಾಗುತ್ತದೆ. 2014-15 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.100.00 ಲಕ್ಷಗಳನ್ನು ಒದಗಿಸಲಾಗಿದ್ದು, ರೂ.98.02 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 109.00 ಲಕ್ಷ ಬಿತ್ತನೆ ಮೀನು ಮರಿಗಳನ್ನು ಆಯ್ದ ಜಲಾಶಯಗಳಲ್ಲಿ ಬಿತ್ತನೆ ಮಾಡಲಾಗಿದೆ.

**4.4 ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ (2405-00-110-0-02)**

"ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ" ಎಂಬ ಯೋಜನೆಯಡಿ ಕರಾವಳಿ ಮತ್ತು ಒಳನಾಡಿನಲ್ಲಿ ಸಾಂಪ್ರದಾಯಿಕ ಮೀನುಗಾರರಿಗೆ ಮೀನು ಹಿಡುವಳಿಗೆ ಬೇಕಾದ ಒಟ್ಟು ರೂ.10,000/- ಮೌಲ್ಯದ ಬಲೆ, ಮತ್ತು ಪೂರಕ ಸಾಮಗ್ರಿಗಳನ್ನು ಕಿಟ್ ರೂಪದಲ್ಲಿ ಶೇಕಡ 100ರಷ್ಟು ಸಹಾಯಧನ ನೀಡಲಾಗುವುದು. 2014-15 ನೇ ಸಾಲಿನಲ್ಲಿ ರೂ.400.00 ಲಕ್ಷಗಳ ಅನುದಾನವನ್ನು ಈ ಯೋಜನೆಗೆ ಬಿಡುಗಡೆಗೊಳಿಸಲಾಗಿದ್ದು 4000 ಫಲಾನುಭವಿಗಳಿಗೆ ಸಹಾಯಧನ ನೀಡಲು ರೂ.399.94 ಲಕ್ಷ ವೆಚ್ಚ ಮಾಡಲಾಗಿದೆ.

**4.5 ಮೀನು ತತ್ತಿಗಳು (2405-00-800-0-29)**

ಮೀನುಮರಿ ಉತ್ಪಾದನೆಯನ್ನು ಹೆಚ್ಚಿಸಲು ಮೀನುಮರಿ ಉತ್ಪಾದನಾ ಕೇಂದ್ರಗಳ ನಿರ್ಮಾಣ ಮತ್ತು ನಿರ್ವಹಣೆಗೆ ಅವಕಾಶ ಕಲ್ಪಿಸಲಾಗಿದೆ. 2014-15 ನೇ ಸಾಲಿನಲ್ಲಿ ರೂ.50.00 ಲಕ್ಷ ಅನುದಾನ ಒದಗಿಸಲಾಗಿದ್ದು, ಕಾರಂಜಾದಲ್ಲಿ ನೀರು ಸರಬರಾಜಿಗಾಗಿ ರೂ.93.00 ಲಕ್ಷ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಮಂಜೂರಾತಿ ದೊರೆತಿದ್ದು, ರೂ.50.00 ಲಕ್ಷ ಬಿಡುಗಡೆಯಾಗಿದೆ. ಸದರಿ ಮೊತ್ತವನ್ನು ಅನುಷ್ಠಾನ ಸಂಸ್ಥೆ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಯಮಿತ ಬಿಡುಗಡೆ ಮಾಡಲಾಗಿದೆ.

**4.6 ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಹರಿಗೋಲು ವಿತರಣೆ (2405-00-101-0-56)**

ಮೀನುಗಾರರ ಶ್ರೇಯೋಭಿವೃದ್ಧಿ ಮತ್ತು ಅವರ ಜೀವರಕ್ಷಣೆಯ ದೃಷ್ಠಿಯಿಂದ ಮೀನುಗಾರಿಕೆ ಇಲಾಖೆಯು "ಒಳನಾಡು ಮೀನುಗಾರರಿಗೆ ಫೈಬರ್‌ಗ್ಲಾಸ್ ಹರಿಗೋಲುಗಳ ವಿತರಣೆ" ಎಂಬ ನೂತನ ಕಾರ್ಯಕ್ರಮವನ್ನು ರೂಪಿಸಿದೆ. ಫೈಬರ್‌ಗ್ಲಾಸ್ ಹರಿಗೋಲುಗಳು ಸದೃಢವಾಗಿದ್ದು ಮೀನುಗಾರರು ಆಳನೀರಿನಲ್ಲಿ ಮೀನುಗಾರಿಕೆಯಲ್ಲಿ ತೊಡಗಲು ಹಾಗೂ ಜೀವ ರಕ್ಷಣೆ ದೃಷ್ಟಿಯಿಂದ ಸಹಕಾರಿಯಾಗಿರುವುದಲ್ಲದೆ ದೀರ್ಘ ಬಾಳಿಕೆಯನ್ನು ನೀಡುತ್ತವೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಒಳನಾಡು ಪ್ರದೇಶಗಳ ಕೆರೆ, ಜಲಾಶಯ ಹಾಗೂ ನದಿಭಾಗಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರಿಗೆ ಸದ್ರಿ ಯೋಜನೆಯಡಿ ತಲಾ ಒಂದು ಫೈಬರ್‌ಗ್ಲಾಸ್ ಹರಿಗೋಲು ಹಾಗೂ ಎರಡು ಹುಟ್ಟುಗಳನ್ನು ರೂ.10,000/- ಘಟಕ ವೆಚ್ಚದಲ್ಲಿ ನೀಡಲು ಅವಕಾಶ ಮಾಡಲಾಗಿದೆ. 2014-15 ನೇ ಸಾಲಿನಲ್ಲಿ ಈ ಯೋಜನೆಗೆ ರೂ.200.00 ಲಕ್ಷಗಳನ್ನು ಹೆಚ್ಚುವರಿ ಅನುದಾನವಾಗಿ ನೀಡಲಾಗಿದ್ದು, 2000 ಮೀನುಗಾರರಿಗೆ ಸೌಲಭ್ಯ ನೀಡಲು ರೂ.198.21 ಲಕ್ಷ ವೆಚ್ಚ ಮಾಡಲಾಗಿದೆ.

**5. ಮೀನುಗಾರರ ಕಲ್ಯಾಣ ಯೋಜನೆಗಳು:**

### 5.1 ಸಂಕಷ್ಟ ಪರಿಹಾರ ನಿಧಿ (2405–00–103–0–15):

ಮೀನುಗಾರಿಕೆ ಮಾಡುವಾಗ ಅಪಘಾತದಲ್ಲಿ ಮೃತಪಟ್ಟ ಪ್ರಕರಣಗಳಲ್ಲಿ ಮೃತರ ವಾರಸುದಾರರಿಗೆ ಅಥವಾ ಪೂರ್ಣ ಅಂಗವಿಕಲರಾದಲ್ಲಿ ಅವರಿಗೆ ಪರಿಹಾರ ನೀಡಲು ಮೀನುಗಾರರ ಸಂಕಷ್ಟ ಪರಿಹಾರ ನಿಧಿ ಸ್ಥಾಪಿಸಲಾಗಿದೆ. 2013–14 ನೇ ಸಾಲಿನಲ್ಲಿ ಈ ಯೋಜನೆಯಡಿ ಮೀನುಗಾರರು ಮರಣ ಹೊಂದಿದ ಪ್ರಕರಣಗಳಲ್ಲಿ ನೀಡಲಾಗುತ್ತಿರುವ ಪರಿಹಾರವನ್ನು ಗರಿಷ್ಠ ತಲಾ ರೂ.50,000/– ಗಳಿಂದ ತಲಾ ರೂ.100,000/– ಗಳಿಗೆ ಹೆಚ್ಚಿಸಲಾಗಿದೆ. ಬಲೆಹಾನಿ, ದೋಣಿ ಹಾನಿ ಹಾಗೂ ವೈದ್ಯಕೀಯ ವೆಚ್ಚಗಳಿಗೆ ಗರಿಷ್ಠ ರೂ.25,000 ಗಳ ಪರಿಹಾರ ನೀಡಲಾಗುತ್ತದೆ. 2014–15 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.50.00 ಲಕ್ಷ ನಿಧಿಗೆ ಪಾವತಿಸಲಾಗಿದೆ. 55 ಮರಣ ಹೊಂದಿದ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ. 17 ದೋಣಿಗಳಿಗೆ, 2 ಬಲೆ ನಷ್ಟಕ್ಕೆ ಪರಿಹಾರ ನೀಡಿದೆ. ಇದಕ್ಕಾಗಿ ರೂ.47.70 ಲಕ್ಷ ಪರಿಹಾರ ನೀಡಲಾಗಿದೆ.

### 5.2 ಸಾಮೂಹಿಕ ಅಪಘಾತ ವಿಮಾ ಯೋಜನೆ (2405–00–120–0–07–106):

ಕೇಂದ್ರ ಪುರಸ್ಕೃತ ಸಾಮೂಹಿಕ ಅಪಘಾತ ವಿಮಾ ಯೋಜನೆಯಡಿಯಲ್ಲಿ ಮೀನುಗಾರರ ವಿಮಾ ಕಂತಿನ ಹಣ ತಲಾ ರೂ.20.27 ಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತಿಶತ 50ರಂತೆ ಪ್ರತಿ ವರ್ಷ ದೆಹಲಿ ಯಲ್ಲಿರುವ ಮೀನುಗಾರಿಕೆ ಸಹಕಾರಿ ಸಂಘಗಳ ರಾಷ್ಟ್ರೀಯ ಮಹಾಮಂಡಳಿಗೆ (ಫಿಶ್ಕೋಫೆಡ್) ರಾಜ್ಯದ 2,04,689 ಮೀನುಗಾರರಿಗೆ ವಿಮಾ ಸೌಲಭ್ಯ ಒದಗಿಸಲು ಪಾವತಿ ಮಾಡಲಾಗಿದೆ. 2014–15 ನೇ ಸಾಲಿನಲ್ಲಿ ಈ ರೂ.20.75 ಲಕ್ಷ ವಿಮಾ ಕಂತನ್ನು ರಾಜ್ಯ ಸರ್ಕಾರವು ಫಿಶ್ಕೋಫೆಡ್, ನವದೆಹಲಿಗೆ ಪಾವತಿಸಿದೆ. 2014–15 ನೇ ಸಾಲಿನಲ್ಲಿ ರೂ.37.50 ಲಕ್ಷದ ಪರಿಹಾರ ಮೊತ್ತವನ್ನು 38 ಪ್ರಕರಣಗಳಲ್ಲಿ ಇತ್ಯರ್ಥಗೊಳಿಸಲಾಗಿದೆ.

### 5.3 ಕೇಂದ್ರ ಸರ್ಕಾರದ ಮನೆಗಳ ನಿರ್ಮಾಣ ಯೋಜನೆ (2405–00–120–0–07–104):

ಈ ಯೋಜನೆಯಡಿ ಕೇಂದ್ರ ಸರ್ಕಾರವು ಮನೆಗಳ ನಿರ್ಮಾಣಕ್ಕಾಗಿ ರೂ.75,000 ಗಳ ಸಹಾಯಧನ ನೀಡಲು ಅವಕಾಶ ಮಾಡಿದೆ. ಸಹಾಯಧನವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಸಮವಾಗಿ ಭರಿಸಲಾಗುತ್ತದೆ. ಈ ಶೀರ್ಷಿಕೆಯಡಿ ಹುಡ್ಕೋ ಸಾಲ ಮರುಪಾವತಿ ಮಾಡಲಾಗುತ್ತಿದೆ. ರೂ.118.28 ಲಕ್ಷ ಮರುಪಾವತಿ ಮಾಡಲಾಗಿದೆ.

### 5.4 ಕರಾವಳಿ ಮೀನುಗಾರರಿಗೆ ಕೇಂದ್ರ ಪುರಸ್ಕೃತ ಉಳಿತಾಯ ಮತ್ತು ಪರಿಹಾರ ಯೋಜನೆ (2405–00–120–0–07–100):

ಸದರಿ ಯೋಜನೆಯಡಿಯಲ್ಲಿ ಮೀನುಗಾರಿಕೆ ಅವಧಿಯಲ್ಲಿ ಕರಾವಳಿ ಮೀನುಗಾರರಿಂದ ರೂ.600 ಗಳನ್ನು ವಸೂಲಿ ಮಾಡಲಾಗುತ್ತದೆ. ಈ ರೀತಿ ವಸೂಲಿ ಮಾಡಿದ ಮೊತ್ತ ರೂ.600 ಗಳಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ತಲಾ ರೂ.600 ಗಳನ್ನು ನೀಡಿ, ಹೀಗೆ ಸಂಗ್ರಹಿಸಿದ ಒಟ್ಟು ರೂ.1,800/–ಗಳನ್ನು ಮೀನುಗಾರಿಕೆ ಇಲ್ಲದ ಮೂರು ತಿಂಗಳಲ್ಲಿ ಮಾಸಿಕ ತಲಾ ರೂ.600 ಗಳನ್ನು ಮೀನುಗಾರರಿಗೆ ನೀಡಲಾಗುವುದು. 2014–15ನೇ ಸಾಲಿನಿಂದ ಕೇಂದ್ರ ಸರ್ಕಾರವು ಈ ಯೋಜನೆಯ ಮಾರ್ಗಸೂಚಿಗಳನ್ನು ಪರಿಷ್ಕರಿಸಿದೆ. ಮೀನುಗಾರರಿಂದ ರೂ.900/– ಗಳನ್ನು ಸಂಗ್ರಹಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರವು ತಲಾ ರೂ.900/– ಗಳನ್ನು ಭರಿಸುತ್ತದೆ.

2014–15 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.450.00 ಲಕ್ಷಗಳ ಅನುದಾನ ಒದಗಿಸಲಾಗಿದೆ. ಕೇಂದ್ರ ಸರ್ಕಾರದಿಂದ ರೂ.233.08 ಲಕ್ಷ ಬಿಡುಗಡೆಯಾಗಿದ್ದು, ರಾಜ್ಯದ ಪಾಲು ರೂ.216.92 ಸೇರಿ 39048 ಫಲಾನುಭವಿಗಳಿಗೆ ರೂ.450.00 ಲಕ್ಷ ಅನುದಾನ ವೆಚ್ಚ ಮಾಡಲಾಗಿದೆ.

### 5.5 ಮತ್ಸ್ಯ ಆಶ್ರಯ ಯೋಜನೆ (2405–00–103–0–20)

ಮೀನುಗಾರರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲು ಮತ್ಸ್ಯಾಶ್ರಯ ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ. ಮತ್ಸ್ಯಾಶ್ರಯ ಯೋಜನೆಯಡಿ ಮನೆಗಳ ನಿರ್ಮಾಣಕ್ಕಾಗಿ ರೂ.1.20 ಲಕ್ಷ ಸಹಾಯಧನವನ್ನು ನೀಡಲಾಗುತ್ತಿದೆ. 2014–15 ನೇ ಸಾಲಿಗೆ 2865 ಮನೆಗಳನ್ನು ಸರ್ಕಾರಿ ಆದೇಶ ಸಂಖ್ಯೆ ಪಸಂಮೀ/101/ಮೀಇಯೋ/2014 ದಿನಾಂಕ:02/09/2014, 25–10–2014 ಮತ್ತು 21.1.2015 ರಲ್ಲಿ ಹಂಚಿಕೆ ಮಾಡಲಾಗಿದೆ. ಹಾಗೂ ಹಿಂದಿನ ಸಾಲಿನಲ್ಲಿ ಮಂಜೂರಾದ ಮನೆಗಳ ನಿರ್ಮಾಣಕ್ಕೆ ಒಟ್ಟು ರೂ.7.70 ಕೋಟಿ ಅನುದಾನವನ್ನು ನೋಡಲ್ ಸಂಸ್ಥೆಯಾದ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ. 2014–15ನೇ ಸಾಲಿನಲ್ಲಿ ಮಂಜೂರಾದ 2865 ಮನೆಗಳ ನಿರ್ಮಾಣ ಪ್ರಾರಂಭಿಸಲು ರೂ.373.39 ಲಕ್ಷ ಬಿಡುಗಡೆ ಮಾಡಲಾತದೆ.

## 6. ಸಂಸ್ಕರಣೆ, ಸಂರಕ್ಷಣೆ ಮತ್ತು ಮಾರಾಟ:

ರಾಜ್ಯದಲ್ಲಿನ ಮೀನುಗಾರಿಕೆ ವಲಯದಲ್ಲಿ ದಿನಂಪ್ರತಿ 5609 ಟನ್ನು ಮಂಜುಗಡ್ಡೆ ಉತ್ಪಾದನೆಯ ಸಾಮರ್ಥ್ಯವುಳ್ಳ 263 ಮಂಜುಗಡ್ಡೆ ಕಾರ್ಖಾನೆಗಳು, 2925 ಟನ್ನುಗಳ ದಾಸ್ತಾನು ಸಾಮರ್ಥ್ಯವುಳ್ಳ 49 ಶೀತಲಗೃಹಗಳು, 1255 ಟನ್ನು ದಾಸ್ತಾನು ಸಾಮರ್ಥ್ಯವುಳ್ಳ 11 ಘನೀಕೃತ ದಾಸ್ತಾನು ಮಳಿಗೆಗಳು, 175 ಟನ್ ಘನೀಕರಣ ಸಾಮರ್ಥ್ಯವುಳ್ಳ 14 ಘನೀಕರಣ ಘಟಕಗಳಿವೆ. ಅಲ್ಲದೆ 528.50 ಟನ್ ಸಾಮರ್ಥ್ಯವುಳ್ಳ 8 ಡಬ್ಬೀಕರಣ ಘಟಕಗಳು, ಹಾಗೂ 424.50 ಟನ್ ಸಾಮರ್ಥ್ಯವುಳ್ಳ 21 ಮೀನು ಹುಡಿ ಘಟಕಗಳಿವೆ.

ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಒಂದು ಮೀನುಗಾರಿಕೆ ಅಭಿವೃದ್ಧಿ ನಿಗಮ ಮತ್ತು ಎರಡು ಜಿಲ್ಲಾ ಸಹಕಾರಿ ಮೀನು ಮಾರಾಟ ಮಹಾಮಂಡಳಿಗಳು ಅಸ್ತಿತ್ವದಲ್ಲಿದ್ದು ಇವುಗಳು ಕೆಲವು ಬಂದರುಗಳಲ್ಲಿ ಮೀನುಗಾರರು ಹಿಡಿದು ತರುವ ಸೀಗಡಿ ಮತ್ತು ತಾಜಾ ಮೀನನ್ನು ಮಾರಾಟ ಮಾಡುತ್ತಿವೆ. ಮೀನುಗಾರರಿಗೆ ಬೇಕಾದ ಡೀಸಲ್, ಮೀನುಗಾರಿಕೆ ಸಲಕರಣೆ, ಬಿಡಿ ಭಾಗ, ಮುಂತಾದವುಗಳನ್ನು ಒದಗಿಸಿ ನಂತರ ಹಿಡಿದ ಮೀನನ್ನು ಅವರಿಂದ ಪಡೆದು ಮಾರಾಟ ಮಾಡಿ ಸಾಲವನ್ನು ವಾಪಸ್ಸು ಪಡೆದುಕೊಳ್ಳುವ ವ್ಯವಸ್ಥೆಯನ್ನು ಈ ಸಂಸ್ಥೆಗಳು ಅಳವಡಿಸಿಕೊಂಡಿವೆ.

### 6.1 ಮೀನು ಮಾರುಕಟ್ಟೆ ನಿರ್ಮಾಣಕ್ಕಾಗಿ ಸಹಾಯ (2405–00–105–0–09)

ರಾಜ್ಯದಲ್ಲಿ ಮೀನು ಮಾರುಕಟ್ಟೆಗಳಲ್ಲಿ ಸ್ವಚ್ಛತೆಯ ಕೊರತೆ ಇದೆ, ಆ ಕಾರಣಕ್ಕಾಗಿ ಸಾರ್ವಜನಿಕರು ಮಾರುಕಟ್ಟೆಗಳಿಗೆ ತೆರಳಿ ಮೀನು ಖರೀದಿಸಲು ಹಿಂಜರಿಯುತ್ತಾರೆ. ಆದುದರಿಂದ ಸ್ವಚ್ಛವಾದ ಮೀನು ಮಾರುಕಟ್ಟೆಗಳನ್ನು ನಿರ್ಮಿಸುವುದು ಅಗತ್ಯ. ಮೀನು ಮಾರುಕಟ್ಟೆಗಳನ್ನು ಸ್ಥಳೀಯ ಸಂಸ್ಥೆಗಳು ನಿರ್ಮಿಸಿ ನಿರ್ವಹಿಸುತ್ತಿದ್ದಾರೆ. ಇಂತಹ ಸ್ಥಳೀಯ ಸಂಸ್ಥೆಯ ನೆರವಿಗಾಗಿ ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯು ಮೀನುಮಾರುಕಟ್ಟೆಗಳ ನಿರ್ಮಾಣಕ್ಕಾಗಿ ಯೋಜನಾ ವೆಚ್ಚದ ಶೇ.90 ರಷ್ಟು ಸಹಾಯಧನವಾಗಿ ನೀಡಲು ಯೋಜನೆ ಹಮ್ಮಿಕೊಂಡಿರುತ್ತಾರೆ. ಆದರೆ ಮಾರುಕಟ್ಟೆಗಳ ನಿರ್ಮಾಣ ಕೈಗೊಳ್ಳಲು ಸ್ಥಳೀಯ ಸಂಸ್ಥೆಗಳು ಉಳಿದ ಶೇ.10 ರಷ್ಟನ್ನು ಭರಿಸಲು ನಿಶ್ಯಕ್ತವಾಗಿವೆ. ಆದುದರಿಂದ ಸ್ಥಳೀಯ ಸಂಸ್ಥೆಗಳ ಸಹಾಯಕ್ಕಾಗಿ ರಾಜ್ಯ ಸರ್ಕಾರವು 2011–12 ನೇ ಸಾಲಿನಲ್ಲಿ ಮೀನು ಮಾರುಕಟ್ಟೆ ನಿರ್ಮಾಣಕ್ಕಾಗಿ ಸಹಾಯ ಯೋಜನೆಯನ್ನು ಪ್ರಾರಂಭಿಸಿರುತ್ತದೆ. ಈ ಯೋಜನೆಯಡಿ ಶೇ.10 ರಷ್ಟಿನ ಮೊತ್ತವನ್ನು ಗರಿಷ್ಠ ರೂ.25.00 ಲಕ್ಷಗಳನ್ನು ರಾಜ್ಯ ಸರ್ಕಾರವು ಭರಿಸುತ್ತದೆ.

2014–15 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.30.00 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ರೂ.29.08 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಈ ಮೊತ್ತವನ್ನು ಉಡುಪಿ, ದಾವಣಗೆರೆ, ಮೈಸೂರು (ಕೆ.ಸಿಎಫ್.ಎಫ್), ಯಡ್ತೊರೆ ಬೈಂದೂರು, ಮತ್ತು ಶಿರಾಲಿಗಳಲ್ಲಿ ಮೀನು ಮಾರುಕಟ್ಟೆ ನಿರ್ಮಾಣಕ್ಕಾಗಿ ನೀಡಲಾಗಿದೆ.

## 7. ಮೀನುಗಾರರ ಸಹಕಾರ ಸಂಘಗಳು:

ರಾಜ್ಯದಲ್ಲಿ 530 ಮೀನುಗಾರಿಕೆ ಸಹಕಾರ ಸಂಘಗಳು ಅಸ್ತಿತ್ವದಲ್ಲಿದ್ದು, ಇವುಗಳಲ್ಲಿ 455 ಸಂಘಗಳು ಕಾರ್ಯಾಚರಣೆಯಲ್ಲಿದ್ದು 75 ಸಂಘಗಳು ಸ್ಥಗಿತಗೊಂಡಿರುತ್ತವೆ. ಇವುಗಳಲ್ಲದೆ ಕರಾವಳಿ ಜಿಲ್ಲೆಗಳಲ್ಲಿ ಎರಡು ಮೀನು ಮಾರಾಟ ಮಹಾಮಂಡಳಿಗಳು ಮತ್ತು ಒಳನಾಡಿನಲ್ಲಿ ಒಂದು ರಾಜ್ಯ ಮಟ್ಟದ ಮಹಾಮಂಡಳಿ

ಕಾರ್ಯಾಚರಣೆಯಲ್ಲಿವೆ. ಈ ಸಹಕಾರ ಸಂಘಗಳ ಕಾರ್ಯ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ಪಾಲು ಬಂಡವಾಳ ನೀಡುವಿಕೆ, ಸಲಕರಣೆ ಸಾಲ, ವ್ಯವಸ್ಥಾಪಕ ಸಹಾಯಧನ ನೀಡುವಿಕೆ, ಮುಂತಾದ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. ಮೀನುಗಾರಿಕೆ ಸಹಕಾರ ಸಂಘಗಳಲ್ಲಿ ಒಟ್ಟು 2,04,689 ಸದಸ್ಯರಿರುತ್ತಾರೆ.

**8. ವಿಶೇಷ ಘಟಕ ಯೋಜನೆ (2405–00–789–0–03)**

ಪರಿಶಿಷ್ಠ ಜಾತಿಯ ಫಲಾನುಭವಿಗಳ ಕಲ್ಯಾಣಕ್ಕಾಗಿ ಈ ಕೆಳಗಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

ಅ) **ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ದೋಣಿ ಮತ್ತು ಮೀನುಗಾರಿಕೆ ಸಲಕರಣೆ ಹಾಗೂ ಕರಾವಳಿ ಮೀನುಗಾರರಿಗೆ ಪಾತಿ ದೋಣಿ ನೀಡುವುದು:** ಈ ಯೋಜನೆಯಡಿ ರೂ.25,000 ವೆಚ್ಚದಲ್ಲಿ ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ದೋಣಿ ಮತ್ತು ಮೀನುಗಾರಿಕೆ ಸಲಕರಣೆ ಹಾಗೂ ಕರಾವಳಿ ಮೀನುಗಾರರಿಗೆ ಪಾತಿ ದೋಣಿಯನ್ನು ಉಚಿತವಾಗಿ ನೀಡುವುದು.

ಆ) **ಕರಾವಳಿ ಮೀನುಗಾರರಿಗೆ ಎಫ್.ಆರ್.ಪಿ ಗಿಲ್ ನೆಟ್ ಮತ್ತು ಓ.ಬಿ.ಎಮ್ ಖರೀದಿಗೆ ಸಹಾಯ:** ಈ ಯೋಜನೆಯಡಿ ಘಟಕ ವೆಚ್ಚವು ರೂ.5.00 ಲಕ್ಷಗಳಾಗಿದ್ದು, ಘಟಕ ವೆಚ್ಚದ ಶೇ.90 ರಷ್ಟು ಗರಿಷ್ಠ ರೂ.4.50 ಲಕ್ಷ ಸಹಾಯಧನವನ್ನು ಕರಾವಳಿ ಮೀನುಗಾರರಿಗೆ ಎಫ್.ಆರ್.ಪಿ ಗಿಲ್ ನೆಟ್ ಮತ್ತು ಓ.ಬಿ.ಎಮ್ ಖರೀದಿಸಲು ನೀಡುವುದು.

ಇ) **ನಾಲ್ಕು ಚಕ್ರ ವಾಹನ ಖರೀದಿಗೆ ಸಹಾಯ:** ಈ ಯೋಜನೆಯಡಿ ಘಟಕ ವೆಚ್ಚವು ರೂ.5.5 ಲಕ್ಷಗಳಾಗಿದ್ದು, ಘಟಕ ವೆಚ್ಚದ ಶೇ.80 ರಷ್ಟು ಗರಿಷ್ಠ ರೂ.4.40 ಲಕ್ಷ ಸಹಾಯಧನವನ್ನು ನಾಲ್ಕು ಚಕ್ರ ವಾಹನ ಖರೀದಿಸಲು ನೀಡುವುದು.

ಈ) **ಮತ್ಸ್ಯಾಶ್ರಯ ಯೋಜನೆ:** ಈ ಯೋಜನೆಯಡಿ ಮನೆಗಳ ನಿರ್ಮಾಣಕ್ಕೆ ರೂ.1,20,000/– ಸಹಾಯಧನ ನೀಡುವುದು.

ಮತ್ಸ್ಯಾಶ್ರಯ ಯೋಜನೆ ಹೊರತು ಪಡಿಸಿ ಉಳಿದ ಕಾರ್ಯಕ್ರಮಗಳಿಗೆ ಶೇಕಡ 50 ರಷ್ಟು ಸಹಾಯಧನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ನೀಡಿ ಉಳಿದ ಸಹಾಯಧನವನ್ನು ಈ ಯೋಜನೆಯಡಿ ನೀಡಲಾಗಿದೆ. ಸದರಿ ಕಾರ್ಯಕ್ರಮಗಳಿಗೆ 2014–15 ನೇ ಸಾಲಿನಲ್ಲಿ ರೂ.370.00 ಲಕ್ಷ ಅನುದಾನ ಒದಗಿಸಲಾಗಿದ್ದು ರೂ.369.10 ಲಕ್ಷ ವೆಚ್ಚ ಮಾಡಲಾಗಿದೆ. ಈ ಯೋಜನೆಯಡಿ 743 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

**9. ಗಿರಿಜನ ಪ್ರದೇಶ ಉಪಯೋಜನೆ (2405–00–796–0–00)**

ಪರಿಶಿಷ್ಠ ಪಂಗಡದ ಫಲಾನುಭವಿಗಳ ಕಲ್ಯಾಣಕ್ಕಾಗಿ ಈ ಕೆಳಗಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

ಅ) **ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ದೋಣಿ ಮತ್ತು ಮೀನುಗಾರಿಕೆ ಸಲಕರಣೆ ಹಾಗೂ ಕರಾವಳಿ ಮೀನುಗಾರರಿಗೆ ಪಾತಿ ದೋಣಿ ನೀಡುವುದು:** ಈ ಯೋಜನೆಯಡಿ ರೂ.25,000 ವೆಚ್ಚದಲ್ಲಿ ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ದೋಣಿ ಮತ್ತು ಮೀನುಗಾರಿಕೆ ಸಲಕರಣೆ ಹಾಗೂ ಕರಾವಳಿ ಮೀನುಗಾರರಿಗೆ ಪಾತಿ ದೋಣಿಯನ್ನು ಉಚಿತವಾಗಿ ನೀಡುವುದು.

ಆ) **ಕರಾವಳಿ ಮೀನುಗಾರರಿಗೆ ಎಫ್.ಆರ್.ಪಿ ಗಿಲ್ ನೆಟ್ ಮತ್ತು ಓ.ಬಿ.ಎಮ್ ಖರೀದಿಗೆ ಸಹಾಯ:** ಈ ಯೋಜನೆಯಡಿ ಘಟಕ ವೆಚ್ಚವು ರೂ.5.00 ಲಕ್ಷಗಳಾಗಿದ್ದು, ಘಟಕ ವೆಚ್ಚದ ಶೇ.90 ರಷ್ಟು ಗರಿಷ್ಠ ರೂ.4.50 ಲಕ್ಷ ಸಹಾಯಧನವನ್ನು ಕರಾವಳಿ ಮೀನುಗಾರರಿಗೆ ಎಫ್.ಆರ್.ಪಿ ಗಿಲ್ ನೆಟ್ ಮತ್ತು ಓ.ಬಿ.ಎಮ್ ಖರೀದಿಸಲು ನೀಡುವುದು.

ಇ) **ನಾಲ್ಕು ಚಕ್ರ ವಾಹನ ಖರೀದಿಗೆ ಸಹಾಯ:** ಈ ಯೋಜನೆಯಡಿ ಘಟಕ ವೆಚ್ಚವು ರೂ.5.5 ಲಕ್ಷಗಳಾಗಿದ್ದು, ಘಟಕ ವೆಚ್ಚದ ಶೇ.80 ರಷ್ಟು ಗರಿಷ್ಠ ರೂ.4.40 ಲಕ್ಷ ಸಹಾಯಧನವನ್ನು ನಾಲ್ಕು ಚಕ್ರ ವಾಹನ ಖರೀದಿಸಲು ನೀಡುವುದು.

ಈ) **ಮತ್ಸ್ಯಾಶ್ರಯ ಯೋಜನೆ:** ಈ ಯೋಜನೆಯಡಿ ಮನೆಗಳ ನಿರ್ಮಾಣಕ್ಕೆ ರೂ.1,20,000/– ಸಹಾಯಧನ ನೀಡುವುದು.

ಮತ್ಸ್ಯಾಶ್ರಯ ಯೋಜನೆ ಹೊರತು ಪಡಿಸಿ ಉಳಿದ ಕಾರ್ಯಕ್ರಮಗಳಿಗೆ ಶೇಕಡ 50 ರಷ್ಟು ಸಹಾಯಧನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ನೀಡಿ ಉಳಿದ ಸಹಾಯಧನವನ್ನು ಈ ಯೋಜನೆಯಡಿ ನೀಡಲಾಗಿದೆ. ಸದರಿ ಕಾರ್ಯಕ್ರಮಗಳಿಗೆ 2014–15 ನೇ ಸಾಲಿನಲ್ಲಿ ರೂ.100.00 ಲಕ್ಷ ಅನುದಾನ ಒದಗಿಸಲಾಗಿದ್ದು ರೂ.98.87 ಲಕ್ಷ ವೆಚ್ಚ ಮಾಡಲಾಗಿದೆ. ಈ ಯೋಜನೆಯಡಿ 332 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

## 10. ಇತರೆ ಯೋಜನೆಗಳು:

### 10.1 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (2405–00–800–0–22)

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 2014–15 ನೇ ಸಾಲಿನಲ್ಲಿ ರೂ.1500.00 ಲಕ್ಷಗಳನ್ನು ಅನುದಾನ ಒದಗಿಸಲಾಗಿರುತ್ತದೆ. ಆದರೆ ರಾಜ್ಯ ಮಟ್ಟದ ಅನುಮೋದನಾ ಸಮಿತಿಯಲ್ಲಿ ಮೀನುಗಾರಿಕೆ ಇಲಾಖೆಗೆ ರೂ.539.00 ಲಕ್ಷ ಮಾತ್ರ ಮಂಜೂರಾಗಿರುತ್ತದೆ. ಈ ಯೋಜನೆಯಡಿ ಜಲಾಶಯಗಳಲ್ಲಿ ಮೀನುಮರಿ ಬಿತ್ತನೆಗೆ ರೂ.100.00 ಲಕ್ಷ ಒದಗಿಸಲಾಗಿರುತ್ತದೆ. ರೂ.439.00 ಲಕ್ಷಗಳನ್ನು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ಫಲಾನುಭವಿಗಳಿಗೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಪ್ರದೇಶ ಯೋಜನೆಯಡಿ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳಿಗೆ (ಮತ್ಸ್ಯಾಶ್ರಯ ಯೋಜನೆ ಹೊರತುಪಡಿಸಿ) ಶೇ.50 ರಷ್ಟು ಸಹಾಯಧನವನ್ನು ಈ ಯೋಜನೆಯಿಂದ ಒದಗಿಸಲಾಗಿದೆ.

ತದನಂತರ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ರೂ.500.00 ಲಕ್ಷ ಮಂಜೂರಾಗಿರುತ್ತದೆ. ಈ ಪೈಕಿ ರೂ.200.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಆದರೆ ಅನುದಾನ ಕಡಿತಗೊಳಿಸಿದ ಕಾರಣ ಸದರಿ ಮೊತ್ತವನ್ನು ಖಜಾನೆಯಿಂದ ಸೆಳೆಯಲು ಸಾಧ್ಯವಾಗಿರುವುದಿಲ್ಲ.

ಈ ಯೋಜನೆಯಡಿ ಒಟ್ಟು ರೂ.538.64 ಲಕ್ಷ ವೆಚ್ಚ ಮಾಡಲಾಗಿದೆ. ಸದರಿ ಯೋಜನೆಯಡಿ ರೂ.100.00 ಲಕ್ಷ ವೆಚ್ಚದಲ್ಲಿ 100 ಲಕ್ಷ ಬಿತ್ತನೆ ಮೀನುಮರಿಗಳನ್ನು ಆಯ್ದ ಜಲಾಶಯಗಳಲ್ಲಿ ಬಿತ್ತನೆ ಮಾಡಲಾಗಿದೆ. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಒಟ್ಟು 975 ಫಲಾನುಭವಿಗಳಿಗೆ ಸಹಾಯ ಮಾಡಲಾಗಿದೆ.

### 10.2 ಸಂಶೋಧನೆ, ವಿಸ್ತರಣೆ, ಪ್ರದರ್ಶನ ಮತ್ತು ತರಬೇತಿ (2405–00–109–0–01):

ಪ್ರಸ್ತುತ ವರ್ಷದಲ್ಲಿ ಮೀನುಗಾರಿಕೆ ವಿಸ್ತರಣೆ ಕಾರ್ಯಕ್ರಮಗಳಾದ ಪ್ರಚಾರ, ಕಾರ್ಯಾಗಾರ, ಸಾಕ್ಷ್ಯಚಿತ್ರ ತಯಾರಿಕೆ, ಮತ್ಸ್ಯಮೇಳ ಏರ್ಪಡಿಸಲು, ಯೋಜನೆಗಳ ಮೌಲ್ಯ ಮಾಪನಾ ವೆಚ್ಚ ಮುಂತಾದವುಗಳಿಗೆ ರೂ.100.00 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. ರೂ.77.61 ಲಕ್ಷ ವೆಚ್ಚ ಮಾಡಲಾಗಿದೆ.

### 10.3 ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು (2405–00–800–0–28):

ಮೀನುಗಾರರು ಮೀನುಗಾರಿಕೆ ಚಟುವಟಿಕೆ ಕೈಗೊಳ್ಳಲು ವಾಣಿಜ್ಯ ಬ್ಯಾಂಕಿನಿಂದ ಶೇ.2 ರ ಬಡ್ಡಿ ದರದಲ್ಲಿ ರೂ.50,000 ಗಳ ವರೆಗೆ ಸಾಲ ಪಡೆಯಲು ಅವಕಾಶವಿರುತ್ತದೆ. ವಾಣಿಜ್ಯ ಬ್ಯಾಂಕುಗಳು ಮೀನುಗಾರರಿಗೆ ಸಾಲ ನೀಡಿದ ಪ್ರಯುಕ್ತ ವ್ಯತ್ಯಾಸದ ಬಡ್ಡಿಯನ್ನು ತುಂಬಿಕೊಡಲು ಅವಕಾಶ ಕಲ್ಪಿಸಲಾಗಿದೆ. 2014–15 ನೇ ಸಾಲಿನಲ್ಲಿ ರೂ.250.00 ಲಕ್ಷ ಅನುದಾನ ಒದಗಿಸಲಾಗಿರುತ್ತದೆ, 19,392_ಮೀನುಗಾರರ ಕ್ಲೇಮ್‌ಗಳಿಗೆ ರೂ.210.68 ಲಕ್ಷ ವೆಚ್ಚ ಮಾಡಲಾಗಿದೆ.

**10.4 ನಿರ್ದೇಶನ ಮತ್ತು ಆಡಳಿತ (2405–00–001–0–01)**

ಈ ಲೆಕ್ಕ ಶೀರ್ಷಿಕೆಯಡಿ ರಾಜ್ಯ ವಲಯ ಯೋಜನೆಯಡಿ ಮಂಜೂರಾದ ಕೇಂದ್ರ ಕಛೇರಿ ಹಾಗೂ ಇತರೆ ಕಛೇರಿಗಳ ಸಿಬ್ಬಂದಿ ವೆಚ್ಚ, ಅಭಿಯಂತರರ ಸಂಬಳ, ಗಣಕಯಂತ್ರ, ಫ್ಯಾಕ್ಸ್ ಯಂತ್ರ ಮತ್ತು ಇತರೆ ವಿದ್ಯುನ್ಮಾನ ಉಪಕರಣಗಳ ಅಳವಡಿಕೆ ಮತ್ತು ಅವುಗಳ ನಿರ್ವಹಣೆ, ವಾಹನ ಖರೀದಿ, ಇತ್ಯಾದಿ ವೆಚ್ಚವನ್ನು ಭರಿಸಲು ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯಡಿ ಇಲಾಖೆಯ ಕಛೇರಿಗಳ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ, ಆಧುನೀಕರಣ ಮತ್ತು ದುರಸ್ತಿ ಕೆಲಸಗಳನ್ನು ತೆಗೆದುಕೊಳ್ಳಲು, ಮತ್ಸ್ಯಾಲಯಗಳ ಕಾಮಗಾರಿಗಳು ಮತ್ತು ನಿರ್ವಹಣೆಗೆ ಬೇಕಾಗುವ ಸಲಕರಣೆಗಳನ್ನು ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಲು, ಅವಕಾಶ ಕಲ್ಪಿಸಲಾಗಿದೆ. 2014–15 ನೇ ಸಾಲಿನಲ್ಲಿ ರೂ.120.00 ಲಕ್ಷ ಅನುದಾನ ಒದಗಿಸಲಾಗಿರುತ್ತದೆ, ಹಾಗೂ ರೂ.10.68 ಲಕ್ಷಗಳನ್ನು ಪುನರ್ ವಿನಿಯೋಗದಿಂದ ಒದಗಿಸಲಾಗಿರುತ್ತದೆ. ರೂ.117.05 ಲಕ್ಷ ವೆಚ್ಚ ಮಾಡಲಾಗಿದೆ.

**10.5 ಒಳನಾಡು ಮೀನುಗಾರಿಕೆ ಅಂಕಿ ಅಂಶಗಳು (ಕೇಂದ್ರ ವಲಯ ಯೋಜನೆ) (2405–00–101–0–06)**

ಈ ಲೆಕ್ಕ ಶೀರ್ಷಿಕೆಯಡಿ ಒಳನಾಡು ಮತ್ತು ಕರಾವಳಿ ಮೀನುಗಾರಿಕೆಯ ಅಂಕಿಅಂಶಗಳನ್ನು ಸಂಗ್ರಹಿಸಲು ಮಾದರಿ ವಿಧಾನಗಳನ್ನು ಅಭಿವೃದ್ಧಿ ಪಡಿಸಲು ಮಂಜೂರು ಮಾಡಿರುವ ಹುದ್ದೆಗಳ ಸಿಬ್ಬಂದಿ ವೆಚ್ಚ, ಗಣಕೀಕೃತ ಯಂತ್ರಗಳನ್ನು ಖರೀದಿ, ಗಣತೀದಾರರನ್ನು ನೇಮಕಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದು ಕೇಂದ್ರ ವಲಯ ಯೋಜನೆಯಾಗಿದ್ದು ಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರದಿಂದ ಭರಿಸಲಾಗುವುದು. 2014–15 ನೇ ಸಾಲಿನಲ್ಲಿ ರೂ.25.00 ಲಕ್ಷ ಅನುದಾನ ಒದಗಿಸಲಾಗಿರುತ್ತದೆ, ಹಾಗೂ ರೂ.3.22 ಲಕ್ಷಗಳನ್ನು ಪುನರ್‌ವಿನಿಯೋಗದಿಂದ ಒದಗಿಸಲಾಗಿರುತ್ತದೆ. ರೂ.18.55 ಲಕ್ಷ ವೆಚ್ಚ ಮಾಡಲಾಗಿದೆ.

**10.6ಮೀನುಗಾರಿಕೆ ಮಾಹಿತಿಯನ್ನು ಮೊಬೈಲ್ ಸಲಹಾ ಸೇವೆಗಳ ಮೂಲಕ ನೀಡುವುದು (2405–00–800–0 82):**

ಈ ಯೋಜನೆಯ ಉದ್ದೇಶ ಮೀನುಗಾರಿಕೆ ಕುರಿತು ಜ್ಞಾನ ಮತ್ತು ಸಂಬಂಧಿತ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಉಚಿತವಾಗಿ ತಲುಪಿಸುವುದು. ಮೀನುಗಾರರಿಗೆ ಮೀನುಗಾರಿಕೆಗೆ ಸಂಬಂಧಿಸಿದ ಪ್ರಮುಖ ವಿಷಯ, ಸಮುದ್ರ ಹವಾಮಾನ ಮಾಹಿತಿ, ಸರ್ಕಾರದ ಯೋಜನೆ, ಮಾರುಕಟ್ಟೆ ದರ, ಮೀನುಗಾರಿಕೆಗೆ ಸಾಮರ್ಥ್ಯವುಳ್ಳ ವಲಯ, ಇತ್ಯಾದಿಗಳ ಬಗ್ಗೆ ಉಚಿತ ಸಂದೇಶಗಳನ್ನು ಕನ್ನಡದಲ್ಲಿ ನೀಡಲಾಗುತ್ತದೆ. ಈ ಯೋಜನೆಯಡಿ ರೂ.100.00 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಪೂರ್ಣ ಅನುದಾನ ವೆಚ್ಚ ಮಾಡಲಾಗಿದೆ.

**10.7 ಜಿಲ್ಲಾ ಮಟ್ಟದ ಕಛೇರಿಗಳಿಗೆ ನೀರು ಮತ್ತು ಮಣ್ಣಿನ ಗುಣಮಟ್ಟ ಪರೀಕ್ಷೆ ಕಿಟ್‌ನ್ನು ವಿತರಿಸುವ ಬಗ್ಗೆ (2405–00–800–0–83):**

ಒಳನಾಡು ಮೀನು ಉತ್ಪದನಾ ಘಾರಂಗಳ / ಮೀನು ಕೃಷಿ ಕೊಳಗಳ ನಿರ್ಮಾಣಕ್ಕಾಗಿ ಸ್ಥಳ ಆಯ್ಕೆ ಮಾಡುವಾಗ ಪ್ರಮುಖವಾಗಿ ನೀರಿನ, ಮಣ್ಣಿನ ಹಾಗೂ ಸ್ಥಳೀಯ ಗುಣಲಕ್ಷಣಗಳನ್ನು ಪರಿಶೀಲಿಸುವುದು ಅಗತ್ಯ. ಒಳ್ಳೆಯ ಸ್ಥಳದ ಆಯ್ಕೆ ಮಾಡಿದಲ್ಲಿ ಮಾತ್ರ ಉದ್ದಿಮೆದಾರರು ಯಶಸ್ಸನ್ನು ನಿರೀಕ್ಷಿಸಲು ಸಾಧ್ಯ. ಆದರೆ ಈ ರೀತಿ ಮಣ್ಣಿನ ಹಾಗೂ ನೀರಿನ ಗುಣಮಟ್ಟವನ್ನು ಪರೀಕ್ಷಿಸಲು ಕೃಷಿಕರು ವಿಶ್ವವಿದ್ಯಾಲಯಗಳ ಆಶ್ರಯ ಪಡೆಯಬೇಕಾಗಿದ್ದು, ವಿಶ್ವವಿದ್ಯಾಲಯಗಳಿಂದ ದೂರವಿರುವವರಿಗೆ ಬಹಳ ತೊಂದರೆಯಾಗುತ್ತಿದೆ. ಆದುದರಿಂದ 2014–15 ನೇ ಸಾಲಿನಲ್ಲಿ ಪ್ರತಿ ಜಿಲ್ಲಾ ಮಟ್ಟದ ಕಛೇರಿಗಳಿಗೆ ನೀರು ಮತ್ತು ಮಣ್ಣಿನ ಗುಣಮಟ್ಟ ಪರೀಕ್ಷೆ ಕಿಟ್‌ನ್ನು ವಿತರಿಸಲು ಪ್ರಸ್ತಾವಿಸಲಾಗಿದೆ. ಈ ಯೋಜನೆಯಡಿ ರೂ.30.00 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ರೂ.28.08 ಲಕ್ಷ ವೆಚ್ಚ ಮಾಡಲಾಗಿದೆ. 188 ನೀರು ಗುಣಮಟ್ಟದ ಕಿಟ್ ಹಾಗೂ 155 ಮಣ್ಣಿನ ಪರೀಕ್ಷೆ ಕಿಟ್‌ಗಳನ್ನು ಎಲ್ಲಾ ತಾಲ್ಲೂಕು ಕಛೇರಿಗಳಿಗೆ ನೀಡಲಾಗಿದೆ.

**11. ಜಿಲ್ಲಾ ಪಂಚಾಯತ್ ಯೋಜನೆಗಳ ವಿವರ:**

**11.1 ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ (2405–00–101–0–27)**

ಈ ಲೆಕ್ಕ ಶೀರ್ಷಿಕೆಯಡಿ ಕಛೇರಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ, ಮೀನು ಮರಿ ಉತ್ಪಾದನಾ ಕೇಂದ್ರಗಳ ಮತ್ತು ತಾಲ್ಲೂಕು ಮಟ್ಟದ ನರ್ಸರಿಗಳ ದುರಸ್ತಿ ಮತ್ತು ಸುಧಾರಣೆ, ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರಿಕೆ ಜೆಟ್ಟಿಗಳ, ಇಳಿದಾಣ ಕೇಂದ್ರಗಳ, ಹರಾಜು ಪ್ರಾಂಗಣಗಳ ನಿರ್ಮಾಣ ಮತ್ತು ನಿರ್ವಹಣೆ, ಕಾರವಾರ, ಹಾಸನ, ಬೆಳಗಾವಿ, ಕಲಬುರ್ಗಿ, ದಕ್ಷಿಣ ಕನ್ನಡ, ಬೀದರ್, ಕೋಲಾರ, ಕೊಡಗು ಮತ್ತು ವಿಜಯಪುರ ಜಿಲ್ಲೆಗಳ ಮತ್ಸ್ಯಾಲಯಗಳ ನಿರ್ವಹಣೆ ವೆಚ್ಚ ಮತ್ತು ಇತರ ಸಾಮಗ್ರಿಗಳ ಖರೀದಿಗೆ ಅನುದಾನವನ್ನು ಒದಗಿಸಲಾಗಿದೆ. 2014–15 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.265.37 ಲಕ್ಷ ಅನುದಾನ ಒದಗಿಸಲಾಗಿದ್ದು, ರೂ.235.26 ಲಕ್ಷ ವೆಚ್ಚ ಮಾಡಲಾಗಿದೆ.

**11.2 ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ (2405–00–101–0–28):**

ಈ ಯೋಜನೆಯಡಿ ಜೌಗು ಹಾಗೂ ಚೌಳು ಪ್ರದೇಶಗಳಲ್ಲಿ ಒಂದು ಎಕರೆ ಮೀನು ಕೃಷಿ ಕೊಳ ನಿರ್ಮಿಸಲು ಪ್ರತಿ ಎಕರೆ ಮೀನು ಕೃಷಿ ಕೊಳ ನಿರ್ಮಾಣ ಹಾಗೂ ಮೊದಲ ವರ್ಷದ ಆವರ್ತಕ ವೆಚ್ಚದ ಶೇಕಡ 25 ರಷ್ಟು ಅಂದರೆ ಗರಿಷ್ಠ ರೂ.30,000/– ಸಹಾಯಧನವಾಗಿ ನೀಡಲಾಗುತ್ತದೆ. ಒಂದು ಎಕರೆ ಸ್ವಂತ ಜಮೀನಿನಲ್ಲಿ ಮೀನುಕೃಷಿ ಕೊಳವನ್ನು ನಿರ್ಮಾಣ ಮಾಡಿ ಮೀನುಗಾರಿಕೆಯನ್ನು ತೆಗೆದುಕೊಳ್ಳಲು ಖಾಸಗಿ ವ್ಯಕ್ತಿಗಳಿಗೆ ರೂ.10,000.00 ಗಳ ಸಹಾಯಧನವಾಗಿ ನೀಡಲಾಗುತ್ತದೆ. ಅಲ್ಲದೆ, ಹುಲ್ಲುಗೆಂಡೆ ಮೀನುಮರಿಗಳನ್ನು ಕೆರೆಗಳಲ್ಲಿ ಬಿತ್ತನೆ ಮಾಡಿದ ಕೃಷಿಕರಿಗೆ ಶೇಕಡ 50 ರಷ್ಟು ಗರಿಷ್ಠ ರೂ.5000 ಗಳಿಗೆ ಮೀರದಂತೆ ಸಹಾಯಧನವನ್ನು ನೀಡಲಾಗುವುದು ಹಾಗೂ ಬಾವಿ ಮತ್ತು ನೀರಾವರಿ ಹೊಂಡಗಳಲ್ಲಿ ಮೀನು ಕೃಷಿಗಾಗಿ 250 ಸಾಮಾನ್ಯ ಗೆಂಡೆ ಮರಿಗಳನ್ನು ಉಚಿತವಾಗಿ ಸರಬರಾಜು ಮಾಡಿ ಮೀನು ಕೃಷಿಯನ್ನು ಪ್ರೋತ್ಸಾಹಿಸಲಾಗುವುದು.

ಈ ಯೋಜನೆಯಡಿ ಅನುದಾನವನ್ನು ಮೀನುಮರಿ ಕೇಂದ್ರದಲ್ಲಿ ಮೀನುಮರಿ ಉತ್ಪಾದನೆಗೆ, ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ, ಫಾರಂಗಳಲ್ಲಿ, ಕೇಜ್ ಮತ್ತು ಪೆನ್‌ಗಳಲ್ಲಿ ಮೀನುಮರಿ ಪಾಲನೆಗೆ, ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನುಮರಿ ಖರೀದಿ ಮತ್ತು ಸಾಗಾಣಿಕೆಗೆ, ವಾಹನಗಳ ಖರೀದಿ, ನಿರ್ವಹಣೆ ಮತ್ತು ಇತರ ಸಲಕರಣೆಗಳ ಖರೀದಿಗೆ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ.

ಸದರಿ ಯೋಜನೆಯ ಅನುಷ್ಠಾನಕ್ಕೆ 2014–15 ನೇ ಸಾಲಿನಲ್ಲಿ ರೂ.256.38 ಲಕ್ಷ ಗಳ ಅನುದಾನವನ್ನು ಒದಗಿಸಲಾಗಿರುತ್ತದೆ. ಈ ಮೇಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಒಟ್ಟು ರೂ.225.47 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**11.3ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ (2405–00–101–0–30)**

ಮೀನುಗಾರರು ಮೀನನ್ನು ತಾಜಾ ಹಾಗೂ ಆರೋಗ್ಯಕರ ಸ್ಥಿತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖ ನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು ಖರೀದಿಸಲು ಪ್ರತಿಶತ 50ರ ನೆರವಿನೊಂದಿಗೆ ಗರಿಷ್ಠ ರೂ.2000 ಸಹಾಯ ಧನವನ್ನು ಹಾಗೂ ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.10000/– ಗಳ ಸಹಾಯಧನವನ್ನು ನೀಡಲಾಗುವುದು.

ಇಳಿದಾಣ ಕೇಂದ್ರಗಳಿಂದ ತಾಜಾ ಮೀನನ್ನು ಆರೋಗ್ಯಕರ ರೀತಿಯಲ್ಲಿ ಮಾರಾಟ ಸ್ಥಳಗಳಿಗೆ ತ್ವರಿತ ಸಾಗಾಣಿಕೆಗಾಗಿ ಮೀನುಗಾರರಿಗೆ ವಾಹನವನ್ನು ಖರೀದಿಸಲು ಆರ್ಥಿಕ ನೆರವನ್ನು ನೀಡುವ ಉದ್ದೇಶದಿಂದ "ಮತ್ಸ್ಯವಾಹಿನಿ" ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ತ್ರಿಚಕ್ರ ಟೆಂಪೋ ರಿಕ್ಷಾವನ್ನು ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.30,000 ಗಳ ಸಹಾಯಧನವನ್ನು ಹಾಗೂ ನಾಲ್ಕು ಚಕ್ರದ ವಾಹನ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.35,000 ಗಳ ಸಹಾಯಧನವನ್ನು ಮೂರು ಅಥವಾ ನಾಲ್ಕು ಫಲಾನುಭವಿಗಳ ಒಂದು ಗುಂಪಿಗೆ ನೀಡಲಾಗುವುದು.

ಇದಲ್ಲದೆ ಸದರಿ ಯೋಜನೆಯಡಿ ಯಾಂತ್ರೀಕೃತವಲ್ಲದ (ಪಾತಿ) ದೋಣಿ ಹೊಂದಿರುವ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಗರಿಷ್ಠ ರೂ.10000/– ಗಳ ಘಟಕ ವೆಚ್ಚದಲ್ಲಿ ಖರೀದಿಸಲು ಮತ್ತು ಪ್ರತಿಶತ 50 ರಷ್ಟು ಅಂದರೆ ಗರಿಷ್ಠ ರೂ.5000/– ಗಳನ್ನು ಸಹಾಯಧನವಾಗಿ ನೀಡಲು ಅವಕಾಶ ಕಲ್ಪಿಸಲಾಗಿದೆ.

2014–15 ನೇ ಸಾಲಿನಲ್ಲಿ ಈ ಯೋಜನೆಗಾಗಿ ರೂ.94.06 ಲಕ್ಷ ಆಯವ್ಯಯ ಒದಗಿಸಿದ್ದು, ರೂ.81.97 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 1460 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

**11.4 ಪ್ರದರ್ಶನ ಮತ್ತು ತರಬೇತಿ (2405–00–101–0–32):**

ಮೀನು ಕೃಷಿಯ ಹಿತದೃಷ್ಟಿಯಿಂದ ಸಾರ್ವಜನಿಕರ ಮಾಹಿತಿಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ವಸ್ತು ಪ್ರದರ್ಶನದಲ್ಲಿ ಮೀನುಗಾರಿಕಾ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಪ್ರದರ್ಶಿಸಲಾಗುವುದು. ಹಾಗೂ ಆಸಕ್ತಿ ಹೊಂದಿದ ಕೃಷಿಕರಿಗೆ ಮೀನು ಕೃಷಿಯ ಬಗ್ಗೆ ತರಬೇತಿ ನೀಡುವುದು, ಮತ್ಸ್ಯಪಾಲನೆ ಮತ್ತು ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುವುದು. ಪ್ರದರ್ಶನ ಮತ್ತು ತರಬೇತಿಗೆ ರೂ. 49.03 ಲಕ್ಷ ಅನುದಾನ ಒದಗಿಸಲಾಗಿದ್ದು ರೂ. 49.58 ಲಕ್ಷ ವೆಚ್ಚವಾಗಿದೆ.

**11.5 ಕೇಂದ್ರ ಪುರಸ್ಕೃತ ಯೋಜನೆ: ಸಾಂಪ್ರದಾಯಿಕ ನಾಡದೋಣಿಗಳ ಮೋಟರೀಕರಣ ಯೋಜನೆ (2405–00–196–6–01) ಜಿಲ್ಲಾ ವಲಯ:**

ಕೇಂದ್ರ ಪುರಸ್ಕೃತ ಸಾಂಪ್ರದಾಯಿಕ ದೋಣಿಗಳ ಮೋಟರೀಕರಣ ಯೋಜನೆಯನ್ನು ರಾಜ್ಯದಲ್ಲಿ 1987–88ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಇದುವರೆವಿಗೆ 3493 ನಾಡದೋಣಿಗಳನ್ನು ಮೋಟರೀಕರಣಗೊಳಿಸಲಾಗಿದೆ. ಈ ಯೋಜನೆಯಡಿ ಪ್ರತಿ ಔಟ್ ಬೋರ್ಡ್ ಮೋಟಾರಿಗೆ ಘಟಕ ವೆಚ್ಚದ ಶೇ.50 ರಷ್ಟು ಅಂದರೆ ಗರಿಷ್ಠ ರೂ.30,000/– ರಂತೆ ಸಹಾಯಧನ ನೀಡಲಾಗುತ್ತಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 50:50 ಅನುಪಾತದಲ್ಲಿ ಈ ಸಹಾಯಧನವನ್ನು ನೀಡುತ್ತಿವೆ. ಫಲಾನುಭವಿಗಳು ಉಳಿದ ಹಣವನ್ನು ಹಣಕಾಸು ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಪಡೆಯಲು ಅವಕಾಶವಿದೆ. 2014–15 ನೇ ಸಾಲಿನಲ್ಲಿ ರೂ.106.20 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, ಕೇಂದ್ರ ಸರ್ಕಾರದಿಂದ ರೂ.44.60 ಲಕ್ಷ ಬಿಡುಗಡೆಯಾಗಿದ್ದು, ಯೋಜನೆಗೆ ಒಟ್ಟು ರೂ.89.20 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. 310 ದೋಣಿಗಳಲ್ಲಿ ಮೋಟರ್ ಅಳವಡಿಸಲು ರೂ.88.33 ಲಕ್ಷ ಅನುದಾನ ವೆಚ್ಚ ಮಾಡಲಾಗಿದೆ.

2014–15 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಯೋಜನೆಗಳ ಅನುಷ್ಠಾನದಲ್ಲಿ ಸಾಧಿಸಲಾದ ಆರ್ಥಿಕ ಪ್ರಗತಿಯನ್ನು ಕೆಳಗೆ ನಮೂದಿಸಲಾಗಿದೆ.

(ರೂ. ಲಕ್ಷಗಳಲ್ಲಿ)

| **ಯೋಜನೆ** | **ಅನುದಾನ** | **ವೆಚ್ಚ** |
|---|---|---|
| 1) ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ | 265.37 | 235.26 |
| 2) ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ | 256.38 | 225.47 |
| 3)ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ | 99.06 | 81.97 |
| 4) ಪ್ರದರ್ಶನಗಳು ಮತ್ತು ತರಬೇತಿ | 49.03 | 49.58 |
| 5) ಕೇಂದ್ರ ಪುರಸ್ಕೃತ– ಸಾಂಪ್ರದಾಯಿಕ ದೋಣಿಗಳ ಯಾಂತ್ರೀಕರಣ | 106.20 | 88.33 |
| **ಒಟ್ಟು** | **771.04** | **680.63** |

**12. ವೆಚ್ಚ ಮತ್ತು ಆದಾಯ:**

2013–14 ಮತ್ತು 2014–15 ನೇ ಸಾಲುಗಳಲ್ಲಿ ಇಲಾಖೆಯ ವಿವಿಧ ಯೋಜನೆಗಳಡಿ ಆಗಿರುವ ವೆಚ್ಚ ಮತ್ತು ಆದಾಯದ ವಿವರಗಳು ಕೆಳಕಂಡಂತಿವೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | **ಯೋಜನೆಗಳು** | **2013–14** | **2014–15** |
|---|---|---|---|
| **1** | **ರಾಜ್ಯ ಯೋಜನಾ ಕಾರ್ಯಕ್ರಮಗಳು** | | |
| (ಅ) | ರಾಜ್ಯ ಮಟ್ಟದ ಯೋಜನೆಗಳ ವೆಚ್ಚ | 13952.13 | 12689.27 |
| (ಆ) | ಜಿಲ್ಲಾ ಪಂಚಾಯತ್ ಯೋಜನೆಗಳ ವೆಚ್ಚ | 599.50 | 680.63 |

| | | | |
|---|---|---|---|
| 2 | ಯೋಜನೇತರ ವೆಚ್ಚ | 2808.23 | 2750.08 |
| 3 | ಆದಾಯ | 840.69 | 1495.59 |

**ಮೀನುಗಾರಿಕೆ ನಿರ್ದೇಶಕರು.**

ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು–01, ಕಾ.ಸೂ. ಪ್ರತಿಗಳು (ಪಿ1)